ಈಗ ಅನೇಕರು ಫಾಲ್ಸ್ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡುತ್ತಿದ್ದಾರೆಂದು ದೂರು ಬಂದಿದೆ. ಇದರಲ್ಲಿ ಅನೇಕ ಏಜೆಂಟ್‌ಗಳೂ ಸೇರಿಕೊಂಡಿದ್ದಾರೆ. ಆದುದರಿಂದ ಯಾವ ವೆಹಿಕಲ್ ಕೂಡ ತಪ್ಪಿಸಿಕೊಳ್ಳದ ಹಾಗೆ ರಿಜಿಸ್ಟ್ರೇಷನ್ ಮಾಡಿದರೆ ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕು. ವ್ಯಾಪಾರಕ್ಕಾಗಲಿ, ವ್ಯವಹಾರಕ್ಕಾಗಲಿ, ವಾಹನ ಸೌಕರ್ಯ ಅಗತ್ಯವಾಗಿದೆ. ಕಾಲ ಮತ್ತು ಡಿಸ್ಟೆನ್ಸ್ ಎರಡನ್ನೂ ಕೂಡ ಬಹಳ ಬೇಗ ಕವರ್ ಮಾಡಬೇಕಾದ ಪಕ್ಷದಲ್ಲಿ ವೆಹಿಕಲ್ಸ್ ಬೇಕಾಗುತ್ತದೆ. ಪದೇ ಪದೇ ಟ್ಯಾಕ್ಸನ್ನು ಹಾಕುತ್ತಾ ಬಂದರೆ ಜನ ಸಂಚಾರಕ್ಕೆ, ಸಾಮಾನುಗಳನ್ನು ಸಾಗಿಸುವದಕ್ಕೆ ಕಷ್ಟವಾಗುತ್ತದೆ. ವಸೂಲಾಗಬೇಕಾದ ಹಣವನ್ನು ವಸೂಲು ಮಾಡದೆ ತೆರಿಗೆಗಳನ್ನು ಹೆಚ್ಚಿಸುತ್ತಾ ಹೋಗುವುದು ಸರಿಯಲ್ಲ ಎಂದು ಹೇಳುತ್ತೇನೆ. ಆದುದರಿಂದ ಈಗ ತಂದಿರತಕ್ಕ ಬಿಲ್‌ನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ನಾನು ಒಬ್ಬ ಹಿರಿಯ ಶಾಸಕನಾಗಿ ಈ ಸಭೆಯ ಹಿರಿಯ ಶಾಸಕನಾಗಿ ಈ ಸಭೆಯ ಸ್ಥಾನದಿಂದ ಬಹಳ ಸಂತೋಷದಿಂದ ಒಪ್ಪಿದ್ದೇನೆ. ಕರ್ನಾಟಕ ರಾಜ್ಯ ಶಾಸನ ಸಭೆಯಲ್ಲಿ ಈ ಸಮಸ್ಯೆಯ ವಿಚಾರದಲ್ಲಿ ಅವುಗಳನ್ನು ಬಗೆಹರಿಸತಕ್ಕ ರೀತಿಯಲ್ಲಿ ಏನು ಮಾಡಬೇಕೆಂಬುದನ್ನು ಹೆಚ್ಚಾಗಿ ನನಗಿಂತ ಉಗ್ರವಾಗಿ ಯಾರೂ ವಾದ ಮಾಡಿಲ್ಲ ಎಂದು ನಾನು ತಮಗೆ ಜ್ಞಾಪಕಕ್ಕೆ ತಂದು ಕೊಡುತ್ತೇನೆ. ರಾಜ್ಯಾಂಗದತ್ತವಾಗಿ ಜಾರಿಗೆ ತರಬೇಕಾದ್ದನ್ನು, ಮತ್ತು ರಾಜ್ಯಾಂಗದಲ್ಲಿರತಕ್ಕ ರಕ್ಷಣೆಗಳನ್ನು ಏನ್ನು ಜಾರಿಗೆ ಕೊಡಬೇಕಾಗಿತ್ತೋ ಅದನ್ನು ಸಾಕಷ್ಟು ರೀತಿಯಲ್ಲಿ ಜಾರಿಗೆ ಕೊಟ್ಟಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಶೈಕ್ಷಣಿಕ ಕ್ಷೇತ್ರದಲ್ಲಿ ಎಷ್ಟು ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲ. ಈ ಒಂದು ಜನಗಳ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ, ಇವರಲ್ಲಿರತಕ್ಕ ಸಮಸ್ಯೆಗಳನ್ನು ಎಷ್ಟರಮಟ್ಟಿಗೆ ಬಗೆಹರಿಸಲಾಗಿದೆ ಎನ್ನುವುದನ್ನು ಹೋಲಿಸಿ ನೋಡಿದರೆ ಪ್ರಗತಿಯಾಗಿರತಕ್ಕದ್ದು ಬಹಳ ಕಡಿಮೆ ಕಾಣತಕ್ಕದ್ದು ಸಹಜವಾಗಿದೆ. ರಾಜ್ಯ ಸರ್ಕಾರದವರು ಬಹಳ ಆತುರದಿಂದ ಆಕಾಂಕ್ಷೆಯಿಂದ ಜನತೆಯ ಸಮಸ್ಯೆಯನ್ನು ಅರಿತು ಅವರ ಹಿತವನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಪಾಡಿಕೊಂಡು ಬಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಎಲ್ಲಾ ಪ್ರಜೆಗಳಿಗೂ ಇರತಕ್ಕ ರಕ್ಷಣೆಗಳನ್ನು ಒದಗಿಸಿಕೊಟ್ಟು ಅವರು ತಮ್ಮ ಎಲ್ಲಾ ಹಕ್ಕುಬಾಧ್ಯತೆಗಳನ್ನೂ ಚಲಾಯಿಸಿ ಮುಂದೆ ಬರಬೇಕು ಎಂಬುದು ಮುಖ್ಯ ಗುರಿ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಜ್ಞಾಪಕ ಮಾಡುತ್ತೇನೆ. ಶ್ರೀಮಾನ್ ಕಬಾಡಿಯವರು ಈ ಸಮಾಜ ಕಲ್ಯಾಣ ಇಲಾಖೆಗೆ ಹರಿಜನ ಗಿರಿಜನರ ಉದ್ಧಾರದ ಬಗ್ಗೆ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಬಹಳ ಕಡಿಮೆ ಇದೆ, ಇತರ ಇಲಾಖೆಗಳಿಗೆ ಹೆಚ್ಚು ಹಣವನ್ನು ಒದಗಿಸಿದ್ದೀರಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಆ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ ೮-೧೦-೧೯೭೩ರಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜಅರಸ್ ಅವರು ಕೇಂದ್ರ ಸರ್ಕಾರದ ಯೋಜನಾ ಸಚಿವರಾದ ಶ್ರೀ ಧಾರ್ ಅವರ ಜೊತೆಯಲ್ಲಿ ಮಾತುಕತೆ ನಡೆಸಿ ಹರಿಜನ ಗಿರಿಜನರ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ೨೫ ಕೋಟಿ ರೂಪಾಯಿಗಳ ಒಂದು ಸ್ಪೆಷಲ್ ಪ್ಲಾನ್ ಮಾಡಬೇಕು ಎನ್ನುವುದನ್ನು ಪ್ಲಾನಿಂಗ್ ಕಮಿಷನ್ನಿನಲ್ಲಿ ಒಪ್ಪಿಸಿ ಅದನ್ನು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಕೇಳಿದ್ದಾರೆ. ರಾಷ್ಟ್ರದಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ತೊಂದರೆಯಲ್ಲಿದ್ದು ಯೋಜನೆಗಳ ವಿಚಾರದಲ್ಲಿ ಎಲ್ಲಾ ಉದ್ದೇಶಗಳಿಗೆ ಎಂದರೆ ಆಹಾರದ ಉದ್ದೇಶಗಳಿಗೆ, ದೊಡ್ಡ ನೀರಾವರಿ, ಸಣ್ಣ ನೀರಾವರಿ ಯೋಜನೆಗಳಿಗೆ ಬಹಳ ಹೆಚ್ಚಿನ ಮತ್ತು ಅತಿ ಉತ್ತಮವಾದ ಯೋಜನೆಗಳನ್ನು ಮಾಡಿ, ಇನ್ನು ಅನೇಕ ವಿಧವಾದ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಪರಿಸ್ಥಿತಿ ಬಂದಿರುವುದರಿಂದ ನಮ್ಮ ಯೋಜನೆಗಳಿಗೆ ೧೨ ೧/೨ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದರು. ನಿನ್ನೆಯ ದಿವಸ ನಾನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಈ ಸಮಸ್ಯೆಯನ್ನು ಅವರ ಗಮನಕ್ಕೆ ತಂದಿದ್ದೇನೆ. ಸಾಮಾಜಿಕ ಯೋಜನೆಗಳು ಏನಿವೆಯೋ ಅವುಗಳಿಗೆ ಪ್ಲಾನ್‌ನಲ್ಲಿ ಮತ್ತು ನಾನ್ ಪ್ಲಾನ್‌ನಲ್ಲಿ ಸಪ್ಲಿಮೆಂಟರಿ ಗ್ರಾಂಟ್‌ನಲ್ಲಿ ಕೂಡ ಹೆಚ್ಚುವರಿ ಹಣವನ್ನು ಕೊಡುವುದಕ್ಕೆ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಶ್ರೀಮಾನ್ ಕಬಾಡಿಯವರು ಹಾಗೂ ಇತರ ಮಾನ್ಯ ಸದಸ್ಯರು ಈ ಬಾಬಿಗೆ ಏನು ಹೆಚ್ಚು ಹಣವನ್ನು ಒದಗಿಸಿಲ್ಲ ಎಂದು ಹೇಳಿದ್ದಾರೆಯೋ ಅದನ್ನು ಒಪ್ಪಿಕೊಂಡರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಈ ಬಾಬಿಗೆ ಹಣವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಇನ್ನೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈ ಬಗ್ಗೆ ನಾನು ನಿನ್ನೆ ರಾತ್ರಿ ಪ್ರಸ್ತಾಪ ಮಾಡಿದ್ದೇನೆ. ನೇರವಾಗಿ ಹರಿಜನ ಗಿರಿಜನರ ಅಭಿವೃದ್ಧಿಯಾಗಬೇಕಾದರೆ ಸ್ಥಳೀಯ ಸಂಸ್ಥೆಗಳು ವ್ಯಕ್ತಿಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಡತಕ್ಕ ಯೋಜನೆಗಳು ಏನಿವೆಯೋ ಅವುಗಳಲ್ಲಿ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ೧೦೦ಕ್ಕೆ ೧೮ರಷ್ಟು ಹಣವನ್ನು ಮೀಸಲಾಗಿಡಬೇಕು ಎನ್ನುವ ಪ್ರಯತ್ನವನ್ನು ನಾನು ಸಮಾಜಕಲ್ಯಾಣ ಹಾಗೂ ಸಮುದಾಯ ಅಭಿವೃದ್ಧಿ ಇಲಾಖೆಯ ಮಂತ್ರಿಯಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ದಿಶೆಯಲ್ಲಿ ಕೆಲವು ಇಲಾಖೆಗಳವರು ಒಪ್ಪಿಕೊಂಡಿದ್ದಾರೆ. ಅದನ್ನು ಪಂಚವಾರ್ಷಿಕ

(ಶ್ರೀ ಟಿ. ಆರ್. ಶಾಮಣ್ಣ)

ಯೋಜನೆಯ ಮೊದಲನೆಯ ವರ್ಷದಲ್ಲಿ ಈ ವರ್ಷದಿಂದ ಎಲ್ಲಾ ಇಲಾಖೆಗಳಿಗೂ ಒತ್ತಾಯ ಮಾಡಿ ನಾವು ಏನು ಒಂದು ಉದ್ದೇಶಪಟ್ಟಿದ್ದೇವೆಯೋ ಅದರ ಪ್ರಕಾರ ೨ ಕೋಟಿ ಅಲ್ಲ ೨೦ ಕೋಟಿ ರೂಪಾಯಿಗಳಾದರೂ ಬೇರೆ ಬೇರೆ ಇಲಾಖೆಗಳಿಂದ ಸಾಮಾನ್ಯ ಜನಗಳಿಗೆ, ಎಲ್ಲಾ ಬಡವರಿಗೆ ಏನು ಹಣ ಹೋಗುತ್ತದೆಯೋ ಅದರಲ್ಲಿ ಕನಿಷ್ಠ ೧೮ ಭಾಗ ಹಣವನ್ನು ಮೀಸಲಾಗಿಡಬೇಕು ಎಂದು ನಾನು ಪ್ರಯತ್ನ ಮಾಡಿದ್ದೇನೆ. ಈಗಾಗಲೇ ಕೆಲವು ಇಲಾಖೆಗಳು ಒಪ್ಪಿಕೊಂಡಿವೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು, ನಾವು ಸರ್ಕಾರವನ್ನು ಆಕ್ಷೇಪಣೆ ಮಾಡುತ್ತಾ ಕುಳಿತುಕೊಂಡರೆ ಪ್ರಜಾ ಪ್ರಭುತ್ವದಲ್ಲಿ ಹರಿಜನ ಗಿರಿಜನರ ಉದ್ಧಾರವಾಗುವುದಿಲ್ಲ. ಎಲ್ಲ ಶಾಸಕರು ಇರತಕ್ಕ ಪ್ರದೇಶದಲ್ಲಿ ಕೂಡ ಹರಿಜನ ಗಿರಿಜನರು ಇದ್ದಾರೆ. ೧೦೦ಕ್ಕೆ ೨೦ ಭಾಗ ಇಲ್ಲದಿದ್ದರೂ ಕನಿಷ್ಟ ೧೦ ಭಾಗ ಹರಿಜನರು ಗಿರಿಜನರು ನಮ್ಮ ಶಾಸಕರಿಗೆ ಮತ ಕೊಟ್ಟಿದ್ದಾರೆ. ಆದ್ದರಿಂದ ಪ್ರತಿಯೊಬ್ಬ ಶಾಸಕರು ಮತ್ತು ಲೋಕಸಭಾ ಸದಸ್ಯರು ಕೂಡ ಈ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಮನಸ್ಸು ಮಾಡಿ ಕೆಲಸ ಮಾಡಬೇಕು. ಹಾಗೆಯೇ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಪಂಚಾಯಿತಿ ಅಧ್ಯಕ್ಷರು, ಪುರಸಭೆಯ ಅಧ್ಯಕ್ಷರು, ಮನಸ್ಸುಮಾಡಿ ಹರಿಜನ ಗಿರಿಜನರ ಉದ್ಧಾರದ ಬಗ್ಗೆ ಕೆಲಸ ಮಾಡಬೇಕು. ರಾಜ್ಯಾಂಗಕ್ಕೆ ಬೆಲೆ ಕೊಡಬೇಕು. ಮತ್ತು ಅವರು ನಿರ್ದಿಷ್ಟವಾದ ಮನೋಭಾವನೆಯನ್ನು ತಳೆದರೆ ಈ ಸಮಸ್ಯೆಯನ್ನು ಚೆನ್ನಾಗಿ ಬಗೆಹರಿಸಬಹುದು ಅನಿಸುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ಅಗ್ರಿಕಲ್ಚರಲ್ ಕ್ರೆಡಿಟ್ ಆಪರೇಷನ್ ಅಂಡ್ ಮಿಸಲೇನಿಯಸ್ ಪ್ರಾವಿಜನ್ ಬಿಲ್ಲಿಗೆ ಒಂದು ತಿದ್ದುಪಡಿಯನ್ನು ಲಾ ಡಿಪಾರ್ಟ್‌ಮೆಂಟಿನಲ್ಲಿ ಡ್ರಾಫ್ಟ್ ಮಾಡುತ್ತಿದ್ದಾರೆ. ಆದ್ದರಿಂದ ಮಂಗಳವಾರ ಈ ಸಭೆಯಲ್ಲಿ ಆ ಬಿಲ್ಲನ್ನು ಚರ್ಚೆಗೆ ತೆಗದುಕೊಳ್ಳಬೇಕಾಗಿ ವಿನಂತಿ.

ಅಧ್ಯಕ್ಷರು.—ಆಗಬಹುದು.

ಶ್ರೀ ಎನ್. ರಾಚಯ್ಯ.—ರಾಜ್ಯಾಂಗದಲ್ಲಿ ಯಾವುದೇ ರಕ್ಷಣೆ ಇರಲಿ. ಆ ರೀತಿ ರಕ್ಷಣೆ ಮಾಡತಕ್ಕದ್ದು ಯಾವ ವರ್ಗದವರಿಗೇ ಸೇರಿರಲಿ, ಪ್ರತಿಯೊಬ್ಬ ವ್ಯಕ್ತಿಗೂ, ಅಧಿಕಾರಿಗಳಾಗಲೀ ಶಾಸಗಿಯವರಾಗಲೀ ರಾಜ್ಯಾಂಗದಲ್ಲಿರತಕ್ಕ ರೀತಿಯಲ್ಲಿ ಅದನ್ನು ಅಕ್ಷರಶಃ ಜಾರಿಗೆ ಕೊಡಬೇಕು ಎನ್ನುವ ಮನೋಭಾವವನ್ನು ತಳೆದರೆ ಅದು ಖಂಡಿತವಾಗಿಯೂ ಸಾಧ್ಯವಾಗುತ್ತದೆ.

ಸಮಾಜಕಲ್ಯಾಣ ಇಲಾಖೆಯ ಒಂದು ಬೇಡಿಕೆಗಳು ಈ ಸಭೆಯ ಮುಂದೆ ಬಂದರೆ ಅದರ ಚರ್ಚೆಯಲ್ಲಿ ಹರಿಜನ ಗಿರಿಜನರು ಆಸಕ್ತಿಯನ್ನು ವಹಿಸುತ್ತಾರೆಯೇ ಹೊರತು ಬೇರೆಯವರು ಚರ್ಚೆಯಲ್ಲಿ ಅಷ್ಟು ಆಸಕ್ತಿಯನ್ನು ವಹಿಸುವುದಿಲ್ಲ. ಶಾಸಕರಾದ ನಮ್ಮೆಲ್ಲರ ಕ್ಷೇತ್ರಗಳಲ್ಲಿಯೂ ಹರಿಜನಗಿರಿಜನರು ಇದ್ದಾರೆ, ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಈ ಸಮಸ್ಯೆ ಇರತಕ್ಕ ಜನ ಇದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಕೂಡ ಅಸ್ಪೃಶ್ಯತೆ ಇರುವ ಜನಗಳು ಇದ್ದಾರೆ. ಬಡವರು ಇದ್ದಾರೆ, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸೌಲಭ್ಯ ಇಲ್ಲ. ಆದ್ದರಿಂದ ಅವರುಗಳಿಗೆಲ್ಲರಿಗೂ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿಕೊಡಬೇಕು ಎಂದು ಸಂಬಂಧಪಟ್ಟವರಿಗೆ ಒತ್ತಾಯಪೂರ್ವಕವಾಗಿ ಹೇಳಬೇಕು. ಯಾರಾದರೂ ಸವರ್ಣೀಯರು ಹರಿಜನ ಗಿರಿಜನರ ಬಗ್ಗೆ ಅಸ್ಪೃಶ್ಯತಾ ಭಾವನೆಯನ್ನು ತೋರಿಸಿದರೆ ಅವರ ಮನಸ್ಸು ಪರಿವರ್ತನೆಯಾಗುವ ಹಾಗೆ ಉಪದೇಶ ಮಾಡಬೇಕು. ಯಾರು ಅಸ್ಪೃಶ್ಯರು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಕೆಟ್ಟತನವೇ ಅಸ್ಪೃಶ್ಯತೆ, ದುಷ್ಟತನವೇ ಅಸ್ಪೃಶ್ಯತೆ. ಅದನ್ನು ಬಿಡಬೇಕು. ಇದರ ಬಗ್ಗೆ ಪಾರ್ಲಿಮೆಂಟಿನಲ್ಲಿ ಒಂದು ಆಕ್ಟ್ ಮಾಡಿ ರಾಜ್ಯಾಂಗದ ೧೭ನೇ ಆರ್ಟಿಕಲ್ ಪ್ರಕಾರ ಅಸ್ಪೃಶ್ಯತೆಯನ್ನು ಪ್ರೊಹಿಬಿಟ್ ಮಾಡಿ ಅದನ್ನು ಕೊನೆಗಾಣಿಸಬೇಕು ಎಂದು ತಿದ್ದುಪಡಿಯನ್ನು ಮಾಡುತ್ತಿದ್ದಾರೆ ಪಾರ್ಲಿಮೆಂಟ್ ಮೂಲಕ ಹೋಗುವಂತೆ ಹರಿಜನ ಸಮಸ್ಯೆಗಳು ಎರಡು ಮುಖ್ಯ ಸಮಸ್ಯೆಗಳು ಇವೆ. ಅವು ಅವರ ಅಭಿವೃದ್ಧಿಯನ್ನು ಒಳಗೊಂಡಿವೆ. ಮೊದಲನೆಯ ಸಮಸ್ಯೆ ಸಾಮಾಜಿಕ ದೃಷ್ಟಿಯಿಂದ ಸಮಾಜಿಕ ಅಡ್ಡಿ ಆತಂಕಗಳನ್ನು ತೊಡೆದು ಹಾಕದ ಹೊರತು ಒಳ್ಳೆಯ ಭಾವನೆ ಜನಗಳಲ್ಲಿ ಬೆಳೆಯುವುದಿಲ್ಲ. ಮತ್ತು ಅವರ ಸಂಸ್ಕೃತಿ ಬೆಳವಣಿಗೆ, ಅವರ ವಿದ್ಯಾ ಬೆಳವಣಿಗೆ ಆದ ಹೊರತು ಅವರ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಹರಿಜನ ವಿದ್ಯಾ ಸಮಸ್ಯೆ ಮತ್ತು ಅಸ್ಪೃಶ್ಯತಾ ಸಮಸ್ಯೆಯನ್ನು ಬಗೆಹರಿಸಬೇಕು. ವಿದ್ಯಾ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಪ್ರತಿಯೊಂದು ಹರಿಜನ ಗಿರಿಜನರ ಮಗುವಿಗೂ ಕೂಡ ೧೦ನೇ ಸ್ಟ್ಯಾಂಡರ್ಡ್‌ವರೆಗೂ ಕಡ್ಡಾಯವಾಗಿ ಪುಕ್ಕಟೆಯಾಗಿ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕು. ಹರಿಜನ ಗಿರಿಜನರ ಮಕ್ಕಳಾಗಲೀ ಅಥವಾ ಇನ್ನು ಯಾವುದೇ ಮಕ್ಕಳಾಗಲೀ ವೀಕರ್ ಸೆಕ್ಷನ್ನಿಗೆ ರಾಜ್ಯಾಂಗದ ಆರ್ಟಿಕಲ್ ೪೫–೪೬ರ ಪ್ರಕಾರ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕು. ೪೬ನೇ ಆರ್ಟಿಕಲ್ ಪ್ರಕಾರ ಅವರಿಗೆ ಎಲ್ಲ ಸೌಲಭ್ಯಗಳನ್ನೂ

ಕೊಡಬೇಕು. ನಾವು ಯಾವತ್ತಿಗೂ ಅದಕ್ಕೆ ಆದ್ಯತೆಯನ್ನು ಕೊಡಬೇಕಾಗಿದೆ. ೧೦ ವರ್ಷಗಳಲ್ಲಿ ಅಂದರೆ ೧೯೫೦ ರಿಂದ ೧೯೬೦ರ ಜನವರಿ ೨೬ರೊಳಗೆ ಈ ಒಂದು ಆರ್ಟಿಕಲ್ ಪ್ರಕಾರ ಕಡ್ಡಾಯ ಶಿಕ್ಷಣವನ್ನು ಕೊಡಬೇಕಾಗಿತ್ತು. ಈ ದೇಶದಲ್ಲಿ ನಾವೆಲ್ಲರೂ ಹೆಚ್ಚಾಗಿ ಅವರ ವಿಷಯದಲ್ಲಿ ಭಾಷಣ ಮಾಡುವುದರಿಂದ ಏನೂ ಪ್ರಯೋಜನವಾಗಲಾರದು. ಪ್ರತಿಯೊಬ್ಬರೂ, ಇಲ್ಲಿರತಕ್ಕ ಒಬ್ಬೊಬ್ಬ ಸದಸ್ಯರೂ ಕೂಡ ಹರಿಜನರಿಗೋಸ್ಕರ ನಾವು ಹಾಸ್ಟಲ್ ಮಾಡುತ್ತೇವೆ, ನಾಲ್ಕಾರು ಶಿಶುವಿಹಾರಗಳನ್ನು ಕಟ್ಟಿಸುತ್ತೇವೆಂದು ಹೇಳಬೇಕು. ನಮ್ಮ ನಮ್ಮ ಜಾತಿಯವರಿಗೆ ಮಾತ್ರ ಆ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎನ್ನುವುದಕ್ಕೆ ಬದಲು ಹರಿಜನರಿಗೂ ಕೂಡ ಅಂತಹ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಹೇಳಬೇಕು. ಅವರ ಕ್ಷೇತ್ರಗಳಲ್ಲಿ ಹತ್ತಾರು ಶಿಶುವಿಹಾರಗಳನ್ನು ಕಟ್ಟಿಸುವುದಕ್ಕೆ ಶ್ರಮಪಡಬೇಕು. ಇಲ್ಲದೇ ಹೋದರೆ ಸರ್ಕಾರದವರೇ ಅವುಗಳನ್ನು ಕಟ್ಟಿಸಿಕೊಡಬೇಕು ಎಂದು ಎಲ್ಲರೂ ಅದಕ್ಕೆ ಬೇಕಾದ ಸಲಹೆಗಳನ್ನು ಕೊಟ್ಟು ಸರ್ಕಾರವನ್ನು ಒತ್ತಾಯಪಡಿಸಬೇಕು. ಇಂತಹ ಶಾಸನ ಸಭೆಗಳಲ್ಲಿ ಆ ರೀತಿ ಮಾಡಿದ್ದ ಪಕ್ಷದಲ್ಲಿ ಕಳೆದ ೨೭ ವರ್ಷಗಳಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಖಂಡಿತವಾಗಿ ಇಷ್ಟರೊಳಗೆ ಅನೇಕ ಹರಿಜನ ಗಿರಿಜನರ ಸಮಸ್ಯೆಗಳು ಬಗೆಹರಿಯುತ್ತಿತ್ತು. ಅವರು ಬಹಳವಾಗಿ ದುಡಿಯುವರು. ಅವರೂ ಸಹ ಎಲ್ಲರಂತೆ ಸಮನಾಗಿ ಬಾಳಿ ಬದುಕಬೇಕು. ಆದರೆ ಎಲ್ಲರೂ ಮುಸಲ್ಮಾನರಾಗಬೇಕು, ಹರಿಜನ ಗಿರಿಜನರು ಆಗಬೇಕು, ಕ್ರಿಶ್ಚಿಯನ್ನರು ಆಗಬೇಕು ಎಂಬುದಾಗಿ ಯಾವ ಧರ್ಮದಲ್ಲಿಯೂ ಸಾರಿಲ್ಲ. ಆ ರೀತಿ ಮಾಡಲೂ ಕೂಡದು. ಅವರವರ ಮತ ಧರ್ಮದ ತತ್ವಗಳನ್ನು ನೋಡಿದರೆ, ಎಲ್ಲ ತತ್ವಗಳೂ ಒಂದಕ್ಕೊಂದು ಹೊಂದಿಕೊಳ್ಳುವ ಹಾಗೆ ಇರುತ್ತದೆ. ಆದರೆ ಕೆಲವು ಕಡೆಗಳಲ್ಲಿ ಆ ತತ್ವಗಳ ಪರಿಪಾಲನೆಯಲ್ಲಿ ಏನಾದರೂ ಲೋಪದೋಷಗಳು ಬಂದರೆ ಅವನ್ನು ಸರಿಪಡಿಸುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಒಟ್ಟಿನಲ್ಲಿ ಹರಿಜನ ಗಿರಿಜನರ ಬಗ್ಗೆ ನಿಮ್ಮ ವರ್ಗದ ಮುಖಂಡರೇ ಶೋಷಣೆ ಮಾಡುವುದಕ್ಕೆ ಹೋಗಬಾರದೆಂದು ನಾನು ಅವರಲ್ಲಿ ಮನವಿಮಾಡುತ್ತೇನೆ. ಏಕೆಂದರೆ ಹತ್ತಾರು ವರ್ಷಗಳಿಂದಲೂ ಈ ಜನರನ್ನು ಮನುಷ್ಯರನ್ನಾಗಿ ಕಾಣದೆ ಅಸ್ಪೃಶ್ಯರನ್ನಾಗಿ ಕಾಣುತ್ತಿದ್ದಾರೆ.

೧೧-೦೦ ಎ. ಎಂ.

ಒಬ್ಬ ಸದಸ್ಯರು.—ಈಗ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಬೇರೆ ಜನಾಂಗದವರಿಗೆ ಹೋಗಿದೆ.

ಶ್ರೀ ಎನ್. ರಾಚಯ್ಯ.- ಮಾನ್ಯ ಸದಸ್ಯರು ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿದ್ದರೆ ಈ ಪ್ರಶ್ನೆಯನ್ನು ಹಾಕುತ್ತಿರಲಿಲ್ಲ. ಆದ್ದರಿಂದ ನಾನು ಹೇಳುವುದಿಷ್ಟೇ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮತ್ತು ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಏನಿವೆಯೋ ಅವು ಎಲ್ಲ ಜನಾಂಗದವರಿಗೂ ಸೇರಿರುತ್ತದೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಯಾವಾಗಲೂ ಭಿಕ್ಷುಕರ ಸಮಸ್ಯೆಯನ್ನು ನಿವಾರಣೆ ಮಾಡತಕ್ಕದ್ದಾಗಿದೆ. ಅದು ಕೇವಲ ಹರಿಜನರಿಗೆ ಮಾತ್ರ ಸೇರಿದ್ದು ಎಂಬುದಾಗಿ ಏನೂ ಇಲ್ಲ, ಅದು ಎಲ್ಲ ಜಾತಿಯವರಿಗೂ ಸೇರಿದೆ ಮುಸಲ್ಮಾನರಲ್ಲಿ, ಕ್ರಿಶ್ಚಿಯನ್‌ರಲ್ಲಿ ಭಿಕ್ಷುಕರಿಲ್ಲವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಆಫ್ಟರ್ ಕೇರ್ ಡಿಪಾರ್ಟ್‌ಮೆಂಟ್ ಎಂಬುದಾಗಿ ಏನಿದೆಯೋ ಅದು ಸಣ್ಣ ಮಕ್ಕಳ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದೆ. ಅದೂ ಅಲ್ಲದೆ ಹೆಚ್ಚಿಗೆ ವಯಸ್ಸಾದವರ ಬಗ್ಗೆಯೂ ಸಹ ಇದು ಮುತುವರ್ಜಿವಹಿಸಿ ಕೆಲಸ ಮಾಡಿಸಿಕೊಂಡು ಹೋಗತಕ್ಕ ಇಲಾಖೆಯಾಗಿದೆ ಮತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಕೂಡ ಇವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಾರೆ. ಏನಾದರೂ ಸಮಸ್ಯೆಗಳು ಬಂದರೆ, ಎಲ್ಲ ಜನಾಂಗದವರ ಹಿತವನ್ನೂ ಸಹ ಕಾಪಾಡುತ್ತಾರೆ. ಅಂದಮೇಲೆ ಹರಿಜನರು ಒಂದು ಜಾತಿಗೆ ಸೇರಿದವರಲ್ಲ ಯಾರು ಈ ದೇಶದಲ್ಲಿ ಕಾರ್ಮಿಕರಲ್ಲಿ ಕಾರ್ಮಿಕರಾಗಿ, ಮನುಷ್ಯರಲ್ಲಿ ಮನುಷ್ಯರಾಗಿ ಸರ್ವರ ಸೇವೆಯನ್ನು ಮಾಡಿ ಈ ದೇಶದ ಸಂಪತ್ತನ್ನು ಸೃಷ್ಟಿಮಾಡಲು ಹಾಗೂ ಈ ದೇಶದಲ್ಲಿ ಅನ್ನ, ರಾಗಿ, ಜೋಳ, ಭತ್ತ ಮುಂತಾದುವುಗಳನ್ನು ಬೆಳೆಯುತ್ತಾರೋ, ಮತ್ತು ಹತ್ತಿ ಬಟ್ಟೆ ಮತ್ತು ನೀವು ತೊಡುವ ರೇಷ್ಮೆ ಬಟ್ಟೆಗಳಿಗಾಗಿ ಹತ್ತಿ ಮತ್ತು ರೇಷ್ಮೆಯನ್ನು ಬೆಳೆಯುತ್ತಾರೋ ಅಂತಹವರಿಗೆ ರಾಜ್ಯಾಂಗದಲ್ಲಿ ರಕ್ಷಣೆ ಕೊಟ್ಟಿದ್ದಾರೆ. ಅದನ್ನು ಬಹುಮುಖ್ಯವಾಗಿ ಪರಿಪಾಲನೆ ಮಾಡಬೇಕು. ಕೆಲಸಗಳನ್ನು ಕೊಡುವುದರಲ್ಲಿ ಈಕ್ವಲ್ ವೇಜ್ ಫಾರ್ ಈಕ್ವಲ್ ವರ್ಕ್ ಎಂಬ ತತ್ವವನ್ನು ಜಾರಿಗೆ ತರಬೇಕಾಗಿದೆ. ಎಲ್ಲಿ ಈ ರೀತಿ ಆಗುತ್ತಿದೆಯೆಂಬುದನ್ನು ನೀವೆ ಹೇಳಿ. ಇಂತಹ ಸೌಲಭ್ಯಗಳನ್ನು ಯಾರು ಒದಗಿಸುತ್ತಿದ್ದಾರೆ ? ಇದಕ್ಕೆ ಏಕೆ ಆದ್ಯತೆ ಕೊಡಬೇಕೆಂದು ಅನೇಕ ಜನರು ಹೇಳುತ್ತಾರೆ. ಸರ್ಕಾರವೇ ಇದನ್ನೆಲ್ಲಾ ಮಾಡಬೇಕೆಂದರೆ ಹೇಗೆ ? ಕಮ್ಯೂನಿಸ್ಟ್ ಸರ್ಕಾರ ಇದ್ದಿದ್ದರೆ ಕೇವಲ ೧೦ ವರ್ಷಗಳಲ್ಲಿ ಇವನ್ನೆಲ್ಲಾ ಮಾಡಬಹುದಾಗಿತ್ತು ಎಂದು ಕಾಣುತ್ತದೆ. ಪ್ರಜಾಪ್ರಭುತ್ವದಲ್ಲಿ ಇವರ ರೀತಿನೀತಿಗಳೇ ಬೇರೆಯಾಗಿವೆ. ಹಿಂದಿನಿಂದಲೂ ಎಷ್ಟೋ ಜಾತಿ

(ಶ್ರೀ ಎನ್ ರಾಚಯ್ಯ)

ಗಳಲ್ಲಿ ಅವರವರ ಮತಗಳ ಮೇಲಿನ ಅಭಿಮಾನದಿಂದ ಹಾಸ್ಟಲ್‌ಗಳನ್ನು ನಡೆಸುತ್ತಿದ್ದರು, ಸೊಸೈಟಿಗಳನ್ನು ನಡೆಸುತ್ತಿದ್ದರು, ಯಾವುದಾದರೂ ಬ್ಯಾಂಕನ್ನು ನಡೆಸುತ್ತಿದ್ದರು. ಅಂತಹ ಕಡೆಗಳಲ್ಲಿ ತಮ್ಮವರನ್ನೇ ದೊಡ್ಡ ದೊಡ್ಡ ಹುದ್ದೆಗಳಲ್ಲಿ ನೇಮಿಸಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರಿಗೆ ಆಟಾನಮಿ ಇದೆಯೆಂದು ಬೇಕಾದಷ್ಟು ಅಕ್ರಮಗಳನ್ನು ಮಾಡುತ್ತಿದ್ದರು ಮೊದಲು ಜಾತಿಯ ಮೇಲೆ ಯಾರನ್ನೂ ಕೆಲಸಕ್ಕೆ ಸೇರಿಸುತ್ತಿರಲಿಲ್ಲ. ಈಗ ಅದು ಹೆಚ್ಚಾಗಿದೆಯೆಂದು ಕಾಣುತ್ತಿದೆ. ಲಂಚ ಹೊಡೆಯುವುದಕ್ಕಾಗಿ ಅನೇಕ ಅನ್ಯಾಯಗಳನ್ನು ಇವತ್ತು ಮಾಡುತ್ತಿದ್ದಾರೆ. ಖಾಸಗೀ ಸಂಸ್ಥೆಗಳಲ್ಲಿಯೂ ಮತ್ತು ಸ್ಟ್ಯಾಟ್ಯೂಟರಿ ಬಾಡಿಗಳಲ್ಲಿಯೂ ಎಷ್ಟೋ ಅನ್ಯಾಯಗಳು ಆಗುತ್ತಿವೆ. ಲೋಕಲ್ ಬಾಡಿಗಳಲ್ಲಿ ಮತ್ತು ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್‌ಗಳಲ್ಲಿ ಎಷ್ಟರಮಟ್ಟಿಗೆ ಇಂತಹ ಅನ್ಯಾಯಗಳು ಆಗುತ್ತಿವೆಯೆಂಬುದನ್ನು ಮನಗಾಣ ಬೇಕಾಗಿದೆ. ಅವುಗಳಿಗೆ ಯಾವ ರೀತಿ ಸರ್ಕಾರ ಸಹಾಯ ಮಾಡಬೇಕೋ ಅಷ್ಟರಮಟ್ಟಿಗೆ ಸಹಾಯ ಮಾಡುತ್ತಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಸಹಾಯ ಒದಗುತ್ತಿದೆ. ಆದ್ದರಿಂದ ನಾವು ಬಸವಣ್ಣನವರು, ಬುದ್ಧ ಮತ್ತು ಮಹಾತ್ಮಾಗಾಂಧಿಯವರು ಹೇಳಿರತಕ್ಕ ಮಾದರಿಯಲ್ಲಿ ಮಾಡಿದರೆ ಖಂಡಿತವಾಗಿ ನಮ್ಮ ಇಂತಹ ಸಮಸ್ಯೆಗಳೆಲ್ಲಾ ಬಗೆಹರಿಯುತ್ತವೆ. ಪೈಗಂಬರ್, ಲೋಹಿಯಾ, ಹಾಗೂ ಯೇಸುಕ್ರಿಸ್ತ ಮುಂತಾದವರು ಹೇಳಿರುವ ತತ್ವದ ಪ್ರಕಾರ ಎಲ್ಲ ಜನಾಂಗದವರೂ ಅನುಸರಿಸ ಬೇಕಾಗುತ್ತದೆ. ಇವರೆಲ್ಲರ ತತ್ವದ ತಿರುಳು ಮಾನವೀಯತೆಯ ಆಧಾರದ ಮೇಲೆ ನಿಂತಿದೆ. ಮನುಷ್ಯ ನಾದವನು ನಮ್ಮ ಕೆಲವಾರು ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಬಗೆಹರಿಸುವ ಮನೋಭಾವವನ್ನು ಬೆಳೆಸಿಕೊಂಡು, ಅವರ ಕಷ್ಟವೇ ನಮ್ಮ ಕಷ್ಟ ಎಂಬುದಾಗಿ ತಿಳಿಯಬೇಕಾಗಿದೆ ಹಿಂದೆ ಕ್ರಿಶ್ಚಿಯನ್ನರು ಮುಂತಾದ ಕೆಲವು ಜನಾಂಗದವರು ಬೇರೆ ದೇಶಗಳಿಂದ ಇಲ್ಲಿಗೆ ಬಂದು ನಮ್ಮ ದೇಶದ ಜನರಿಗೆ ಶಿಕ್ಷಣ ಸೌಲಭ್ಯಗಳನ್ನು, ಆಹಾರ, ಬಟ್ಟೆ ಮುಂತಾದುವನ್ನು ಒದಗಿಸಿಕೊಟ್ಟು ನಮ್ಮ ದೇಶದ ಜನರನ್ನು ಅವರ ಮತಕ್ಕೆ ಪರಿವರ್ತನೆ ಮಾಡುತ್ತಿದ್ದರು. ನಾವು ಈಗ ಏನು ಮಾಡುತ್ತಿದ್ದೇವೆಂದರೆ ಅದರ ಸ್ವರೂಪವನ್ನೇ ಬದಲಾವಣೆ ಮಾಡುತ್ತಿದ್ದೇವೆ. ಅದಕ್ಕಾಗಿ ಪ್ರತಿಯೊಬ್ಬ ಮಂತ್ರಿಯೂ, ಪ್ರತಿಯೊಬ್ಬ ಶಾಸಕರೂ, ರಾಷ್ಟ್ರಪತಿಯಿಂದ ಹಿಡಿದು, ಪ್ರಧಾನ ಮಂತ್ರಿಯಿಂದ ಹಿಡಿದು, ಮುಖ್ಯಮಂತ್ರಿಗಳು ಆದಿಯಾಗಿ ಎಲ್ಲಾ ಮಂತ್ರಿಗಳೂ ನಾವು ರಾಜ್ಯಾಂಗಕ್ಕೆ ಬೆಲೆ ಕೊಡಬೇಕು ಎಂಬ ಒಂದು ನೀತಿಯನ್ನು ಕೂಡಲೇ ಪರಿಪಾಲನೆ ಮಾಡಬೇಕು. ನಾಳೆ ಮಾಡುವುದನ್ನು ಈಗಲೇ ಮಾಡೋಣವೆಂಬ ತತ್ವವನ್ನು ಅನುಷ್ಠಾನಕ್ಕೆ ತರ ಬೇಕು. ಈಗಲೇ ಮಾಡುವುದನ್ನು ಇಂದೇ ಮಾಡೋಣವೆಂಬುದಾಗಿ ಮಾಡಿದ್ದಿದ್ದರೆ, ನಿಜವಾಗಿಯೂ ಇಂತಹ ಸಮಸ್ಯೆಗಳು ಏಕೆ ಬಗೆಹರಿಯುವುದಿಲ್ಲ ? ಇನ್ನು ಕೆಲವರು ಸಮಾಜ ಕಲ್ಯಾಣ ಇಲಾಖೆಯೇ ಬೇಡ ವೆಂದು ಹೇಳಿದರು. ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವೇ ಆಗಲಿ ಅಲ್ಲಿ ಕೆಲಸ ಮಾಡು ತ್ತಿರುವವರೆಲ್ಲರೂ ಈ ದೇಶದ ಪ್ರಜೆಗಳಲ್ಲವೇ ? ಇನ್ನು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ಶೇಕಡ ೫೦ ರಷ್ಟು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಎಲ್ಲಿ ಅರ್ಹತೆ ಇರುತ್ತದೆಯೋ ಟೆಕ್ನಿಕಲ್ ಜನರಿದ್ದಾರೋ ಅವರಿಗೆ ಮೀಸಲು ಸ್ಥಾನವೆಂದು ನಿಮ್ಮ ವರ್ಗದವರಿಗೆ ಸೇಕಡ ೧೮ರಷ್ಟು ಬರುವವರೆಗೂ ಮಾಡಿ. ಆಮೇಲೆ ಈ ಮೀಸಲು ಸ್ಥಾನ ಬೇಕಿಲ್ಲ. ಅದೇ ರೀತಿಯಾಗಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿಯೂ ಮತ್ತು ಇತರ ಡಿಪಾರ್ಟ್‌ಮೆಂಟ್‌ಗಳಲ್ಲಿ ಮಾಡಬೇಕು. ಪ್ರತಿಯೊಂದು ಬ್ಯಾಂಕಿನಲ್ಲಿಯೂ ಈ ರೀತಿಯಾದ ಒಂದು ಕಾನೂನನ್ನು ಮಾಡಲೇಬೇಕು. ಅವರಿಗೆ ಸೇಕಡ ೧೮ರಷ್ಟು ಮೀಸಲು ಸ್ಥಾನ ಪ್ರತಿಯೊಂದು ವಿಷಯದಲ್ಲಿಯೂ ಕೊಡಬೇಕೆಂಬುದಾಗಿ ಸರ್ಕಾರ ಏತಕ್ಕೆ ಮನಸ್ಸು ಮಾಡುವುದಿಲ್ಲವೋ ನನಗಂತೂ ಅರ್ಥವಾಗುತ್ತಾ ಇಲ್ಲ. ಇವರು ಏಕೆ ಮನಸ್ಸು ಮಾಡುವುದಿಲ್ಲವೋ ನನಗೆ ಗೊತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ಸದಸ್ಯರು ತಂತಮ್ಮ ಸಮಾಜಕ್ಕೆ ಯಾವುದು ಹಣ ಬರುತ್ತದೆ, ಹುದ್ದೆ ಗಳ ಸೌಲಭ್ಯ ಎಷ್ಟರಮಟ್ಟಿಗೆ ಇದೆ, ಇವುಗಳನ್ನು ಮಾತ್ರ ತಿಳಿದುಕೊಳ್ಳುತ್ತಾರೆ ಇಂತಿಂಥವರಿಗೆ ನಾವು ಬೆಂಬಲ ಮಾಡುತ್ತೇವೆ ಎಂಬುದಾಗಿ ಹೇಳಿಬಿಡುತ್ತಾರೆ. ಇದರ ಬಗ್ಗೆ ಡಾ|| ಲೋಹಿಯಾ ಅವರು ಏನು ಹೇಳಿದ್ದಾರೆಂಬುದನ್ನು ನೋಡಬೇಕು. ಅವರ ತತ್ವದ ಪ್ರಕಾರ ಬೇರೆಯವರು ಈ ಸಮಸ್ಯೆಗಳನ್ನು ಬಗೆಹರಿಸುತ್ತಾ ಇದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಬೇಕಾದಷ್ಟು ಯೋಜನೆ ಗಳನ್ನು ಮಾಡಿದ್ದರೂ ಅನೇಕ ಕಡೆಗಳಲ್ಲಿ ಸರ್ಕಾರದವರು ಹೆಚ್ಚಿನ ಸೌಲಭ್ಯಗಳನ್ನು ನಿಮ್ಮ ಪಂಗಡದವರಿಗೆ ಕೊಡುತ್ತಾ ಇಲ್ಲ. ಅನೇಕ ಪ್ರದೇಶಗಳಲ್ಲಿ ನಾನು ನೋಡಿರುವಹಾಗೆ ಹಿಂದುಳಿದವರಿಗಿಂತಲೂ ಇವರು ಕಡೆಯಾಗಿದ್ದಾರೆ. ಇನ್ನು ಮಾನ್ಯ ಶ್ರೀ ಜಯಪ್ರಕಾಶ್‌ನಾರಾಯಣ್ ಅವರು ಹೇಳಿದ ಹಾಗೆ ನಾವು ನಮ್ಮ ಈ ಸ್ಥಾನದಲ್ಲಿಂಲಿ, ಇಲ್ಲದೇ ಹೋಗಲಿ ಬೇರೆಯವರ ಉಪಯೋಗಕ್ಕಾಗಿ ವರ್ಷೇವರ್ಷೇ ಅವರವರಿಗೆ ಸಂಬಂಧಪಟ್ಟಹಾಗೆ ಕೋ ಆಪರೇಟಿವ್ ಸೊಸೈಟಿಗಳು, ವಿದ್ಯಾಶಾಲೆಗಳು, ಕಾಲೇಜುಗಳು, ಹಾಗೂ ಟ್ರೈನಿಂಗ್ ಕೊಡತಕ್ಕ ಕಾಲೇಜುಗಳನ್ನು ಮಾಡಿಕೊಟ್ಟಿದ್ದಾರೆಂಬುದನ್ನು ನಾವು ನೋಡಬೇಕಾಗಿದೆ. ಈಗ

ಆ ರೀತಿಯಾಗಿ ಮಾತನಾಡಿದವರಲ್ಲಿ ಎಷ್ಟು ಜನ ಸದಸ್ಯರು ಇಲ್ಲಿ ಬೇರೆ ವರ್ಗಕ್ಕೆ ಸೇರಿದ ಜನರು ಇದ್ದಾರೆ? ನಮ್ಮ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ೧೯೫೨ನೇ ಇಸವಿಯಿಂದ ಈ ಸಭೆಯಲ್ಲಿ ಸದಸ್ಯರಾಗಿ ಇಲ್ಲವೇ ಇಲ್ಲ. ಏಕೆ ಅಂತಹ ವಾತಾವರಣ ಆಯಿತೋ ಗೊತ್ತಿಲ್ಲ. ನಿಮ್ಮ ವರ್ಗದ ಸಂಸ್ಥೆಗಳೂ ಸಹ ಸಾಕಷ್ಟು ಆಗುತ್ತಾ ಇಲ್ಲ. ಆದರೆ ಈಗ ಅವರಿಗೆ ಸರ್ಕಾರದವರು ಕೊಡುತ್ತಿರುವ ಟ್ರಾನ್ಸ್‌ಪೋರ್ಟ್ ಫ್ಯಾಸಿಲಿಟೀಸ್ ಏನೇನೂ ಸಾಲದು. ಸಹಕಾರ ಸಂಘಗಳನ್ನು ಸಾಕಷ್ಟು ಮಾಡುತ್ತಾ ಇಲ್ಲ. ಹೌಸಿಂಗ್ ಕಾಲೋನಿಗಳನ್ನೂ ಸಹ ಮಾಡುತ್ತಾ ಇಲ್ಲ. ನಾವೀಗ ಬೇರೆ ಸರ್ಕಾರಗಳನ್ನು ಆಕ್ಷೇಪಣೆ ಮಾಡುವುದರ ಜೊತೆಗೆ ಈ ವಿಚಾರದಲ್ಲಿ ನಮ್ಮ ಜವಾಬ್ದಾರಿ ಏನೆಂಬುದನ್ನು ತಿಳಿಯಬೇಕು. ಆದರ ಬಗ್ಗೆ ನಾವೇನಾದರೂ ನಿರ್ಧಾರ ಮಾಡಿ ನಾವೆಲ್ಲರೂ ಇವತ್ತು ಇಂಡಿಯಾದೇಶದಲ್ಲಿಯೇ ನಮ್ಮ ನಮ್ಮ ರಿಜರ್ವ್ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕು ಎಂಬುದಾಗಿ ಹೇಳಬೇಕಾಗುತ್ತದೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ, ನಾನು ಈ ಒಂದು ಅಧಿಕಾರಕ್ಕೇ ಅಂಟಿಕೊಂಡಿಲ್ಲ. ಅನೇಕ ಸದಸ್ಯರು ಕಾನೂನುಗಳಿಗೆ ಅನುಸಾರವಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿರುವಾಗ, ಅದರ ಬಗ್ಗೆ ಯೋಚನೆಮಾಡಬೇಕಾಗುತ್ತದೆ. ನನಗೆ ಗೊತ್ತಿರುವ ಹಾಗೆ ಕೆಲವು ಮನುಷ್ಯರು ಪ್ರಾಣಿಗಳ ಜೊತೆಯಲ್ಲಿ ಗೆಡ್ಡೆ ಗೆಣಸುಗಳನ್ನು ತಿಂದುಕೊಂಡು ಗುಡ್ಡ ಪ್ರದೇಶಗಳಲ್ಲಿ ವಾಸಮಾಡುವವರೂ ಇದ್ದಾರೆ. ಅವರಿಗೆ ನಮ್ಮ ಸಮಾಜದ ಅರಿವೇ ಇಲ್ಲ. ಅಂತಹವರಿಗೆ ರಾಜ್ಯಾಂಗದ ಪ್ರಕಾರ ವಿಶೇಷವಾದಂಥ ರಕ್ಷಣೆಗಳನ್ನು ಕೊಡಬೇಕೆಂದು ಈಗ ಒಂದು ಸ್ಥಾನವನ್ನು ಕೊಟ್ಟಿದ್ದೇವೆ ಕೆಲವರು ಈ 'ಟ್ರೈಬಲ್ ಪೀಪಲ್ಲಿನಲ್ಲೇನೋ' ಬಡವರು ಇರುವುದು ಎಂದು ಏಕೆ ಕೇಳಿದರು ? ಅವರ ಅಭಿಪ್ರಾಯ ಆ ರೀತಿ ಇದ್ದರೆ ಅದಕ್ಕನುಸಾರವಾಗಿ ಅವರು ಏಕೆ ರಾಜ್ಯಾಂಗವನ್ನು ಬದಲಾವಣೆ ಮಾಡಿಸಬಾರದು ? ಇಂಥ ಮಾತುಗಳನ್ನು ಏನೋ ಸಾಮಾನ್ಯ ಜನರು, ವಿದ್ಯಾಹೀನರು, ದಡ್ಡರಾದವರು ಆಡುತ್ತಿದ್ದಾರೆ ಎಂದು ಸುಮ್ಮನಿರುವುದಕ್ಕೆ ಆ ಮಾತುಗಳನ್ನಾಡತಕ್ಕವರು ಅಂತಹ ಜನರಲ್ಲ. ಆ ಮಾತುಗಳನ್ನು ಆಡತಕ್ಕವರು ಯಾರು ಎಂದರೆ ಒಳ್ಳೇ ವಿದ್ಯಾವಂತರೂ, ಶಾಸಕರೂ ಮತ್ತು ಮಂತ್ರಿಗಳಾಗಿರತಕ್ಕವರು. ಕೆಲವು ವೇಳೆಗಳಲ್ಲಿ ವಿರೋಧ ಪಕ್ಷದ ಮುಖಂಡರೂ ಕೂಡ ಬೇರೆ ಕೋಮುಗಳಲ್ಲಿ ಬಡವರಿಲ್ಲವೋ ಎಂದು ಕೇಳಿದ್ದಾರೆ. ಆದರೆ ಇದು ಬರೀ ಬಡತನವೊಂದರ ಸಮಸ್ಯೆಯಲ್ಲ. ಇಲ್ಲಿ ಒಂದು ಸ್ಟಿಗ್ಮ ಅಂಟಿದೆ.

ಶ್ರೀ ಕೆ. ಎಚ್. ಹನುಮೇಗೌಡ:—ಮಾನ್ಯ ಸಚಿವರು ಸತ್ಯಕ್ಕೆ ದೂರವಾದಂಥ ವಿಷಯವನ್ನು ಹೇಳುತ್ತಿದ್ದಾರೆ. ವಿರೋಧಪಕ್ಷದ ನಾಯಕರು ಯಾವತ್ತೂ ಹರಿಜನರ ಉದ್ಧಾರಕ್ಕಾಗಿ ಅವರ ಹಕ್ಕನ್ನು ರಕ್ಷಣೆ ಮಾಡುವುದಕ್ಕಾಗಿ ಹೋರಾಟ ಮಾಡುತ್ತಿದ್ದರೂ ಮಾನ್ಯ ಸಚಿವರು ಹೀಗೆ ಹೇಳುವುದು ಸರಿಯಲ್ಲ.

ಶ್ರೀ ಎನ್. ರಾಚಯ್ಯ :—ಮಾನ್ಯ ಹನುಮೇಗೌಡರಿಗೆ ನಾನು ಒಂದು ವಿಷಯವನ್ನು ತಿಳಿಸುವುದಾದರೆ-ಅನೇಕ ಸಂದರ್ಭಗಳಲ್ಲಿ ವಿರೋಧ ಪಕ್ಷದ ನಾಯಕರು ಬೇರೆ ಕೋಮುಗಳಲ್ಲಿ ಹರಿಜನರಿಗಿಂತ ಬಡವರಾದವರಿಲ್ಲವೇ ಎಂದು ಏಕೆ ಕೇಳಿದ್ದಾರೆ, ಆದರೆ ಇಲ್ಲಿ ಬಡತನದ ಪ್ರಶ್ನೆ ಅಷ್ಟು ಪ್ರಾಧಾನ್ಯವಲ್ಲ. ರಾಜ್ಯಾಂಗದಲ್ಲಿ ಏನು ಹೇಳಿದೆ ಎಂದರೆ—'ಟ್ರೈಬಲ್ ಕ್ಲಾಸಸ್ ಮತ್ತು ಅನ್‌ಟಚ್ಚಬಲಿಟಿ ಸ್ಟಿಗ್ಮ ಇರತಕ್ಕ ಕ್ಲಾಸ್‌ಗಳಿಗೆ' ಮಾತ್ರ ವಿಶೇಷ ಸೌಲಭ್ಯಗಳನ್ನು ಕೊಡಬೇಕೆಂದಿದೆ ಆದರೆ ಹರಿಜನರಲ್ಲದವರು ಕೆಲವರನ್ನು ಹರಿಜನರಲ್ಲಿ ಏಕೆ ಸೇರಿಸಿದ್ದಾರೆ ? ಅದು ಕಾನೂನಿಗೆ ವಿರುದ್ಧವಾದದ್ದು ಎಂದು ಜತ್ತಿಯವರ ಸರ್ಕಾರವಿದ್ದಾಗ ನಾವು ಅಂಥಾದ್ದಕ್ಕೆ ಆಲೋಚನೆ ಮಾಡಲಿಲ್ಲ. ಇನ್ನು ಕೆಲವರು ಬ್ಯಾಕ್ವರ್ಡಾಗಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈ ಹರಿಜನ ಗಿರಿಜನರನ್ನು ಹಿಂದುಳಿದವರಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಇವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬೇರೆ ಹಿಂದುಳಿದಿದ್ದಾರೆ. ವಿದ್ಯೆಯಲ್ಲಿ ಹಿಂದುಳಿದಿದ್ದಾರೆ. ಸಮಾಜದಲ್ಲಿ ಇವರಿಗೆ ಯಾವ ಸ್ಥಾನಮಾನಗಳೂ ಇರಲಿಲ್ಲ. ಒಂದೇ ಸಮಾಜಕ್ಕೆ ಸೇರಿದ ವ್ಯಕ್ತಿಗಳಲ್ಲಿ ಹೀಗೆ ಅಸಮಾನತೆಗಳಿರಬಾರದು ಎಂದು ಈಗ ವಿಶೇಷ ಸೌಲಭ್ಯಗಳನ್ನು ಕೊಡಲು ರಾಜ್ಯಾಂಗ ನಿರ್ಧರಮಾಡಿದೆ. ಗದ್ದೆಗೆ ನೀರನ್ನು ಬಿಡುವಾಗ ಅಲ್ಲಿ ಭೂಮಿಯನ್ನು ಪಾತಿ-ಪಾತಿಗಳನ್ನಾಗಿ ಏತಕ್ಕೆ ಮಾಡಿದ್ದಾರೆ? ಕಾಲುವೆಯಲ್ಲಿ ಬರತಕ್ಕ ನೀರು ಒಂದೇ ಕಡೆ ನಿಲ್ಲದೆ ಇಡೀ ಭೂಮಿಗೆಲ್ಲಾ ಹರಡುವಂತೆ ಮಾಡಲು ಮತ್ತು ಆ ಎಲ್ಲ ಭೂಮಿಯಲ್ಲೂ ಒಂದೇ ಸಮನಾಗಿ ಭತ್ತ ಬೆಳೆಯುವಂತೆ ಮಾಡುವುದಕ್ಕಾಗಿ ಅಲ್ಲಿ ಪಾತಿಗಳನ್ನು ಮಾಡಿದ್ದಾರೆ. ಅಲ್ಲಿ ಪ್ರತಿಯೊಂದು ಪಾತಿಯಲ್ಲೂ ನೀರು ಸರಿಯಾಗಿ ನಿಂತರಲ್ಲವೇ ಎಲ್ಲ ಕಡೆಯಲ್ಲೂ ಭತ್ತದ ಪೈರು ಒಂದೇ ಸಮನಾಗಿ ಬೆಳೆಯುವುದು ? ಹಿಂದೂ ಸಮಾಜದಲ್ಲಿ ಈ ಹಿಂದೆ ಆಗಿದ್ದ ಅನ್ಯಾಯಗಳನ್ನು ತಪ್ಪಿಸಿ ಎಲ್ಲಾ ವರ್ಗದವರೂ ಒಂದೇ ಸಮನಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ, ರಾಜಕೀಯವಾಗಿ ಮುಂದಕ್ಕೆ ಬರಲೆಂದು ಕೆಲವು ವಿಶೇಷ ಸೌಲಭ್ಯಗಳನ್ನು ಈ ಟ್ರೈಬಲ್ ಮತ್ತು ಅನ್‌ಟಚ್ಚಬಲ್ ಸ್ಟಿಗ್ಮ ಇರತಕ್ಕ ಕ್ಲಾಸುಗಳವರೆಗೆ ರಾಜ್ಯಾಂಗದಲ್ಲಿ ಒದಗಿಸಲಾಗಿದೆ. ಆದರೆ ಅವುಗಳನ್ನು ಸರ್ಕಾರದವರು ಸರಿಯಾಗಿ ಅವರಿಗೆ ಮುಟ್ಟುವಂತೆ ಮಾಡಬೇಕಾಗಿದೆ. ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ಮುಂದೆ ಬಹಳ ಕಷ್ಟವಾಗುತ್ತದೆ. ಕಾರಣ ಈಗ

(ಶ್ರೀ ಎನ್. ರಾಚಯ್ಯ)

ಈ ಜನರೆಲ್ಲಾ ಎಚ್ಚೆತ್ತಿದ್ದಾರೆ ಅವರು ನಿದ್ರೆಯನ್ನು ಹಿಂದಿನಂತೆ ಇಂದು ಮಾಡುತ್ತಿಲ್ಲ. ಅವರು ರೊಚ್ಚಿಗೆದ್ದರೆ ಬುರ್ಜ್ವಾಜಿಗಳ ಸಮಾಜಕ್ಕೆ ಆಟಂಬಾಂಬ್ ಹಾಕಿದಂತಾಗುತ್ತದೆ. ಆದರೆ ಅದನ್ನು ತಪ್ಪಿಸುವುದಕ್ಕಾಗಿ ಇಷ್ಟೆಲ್ಲ ಹೇಳಬೇಕಾಗಿದೆ. ಅವರು ದೇಶದಲ್ಲಿ ಇರತಕ್ಕ ಪ್ರಜಾಪ್ರಭುತ್ವಕ್ಕೆ ಒಂದು ವಿತ್ತಾಗಬಾರದು ಅವರು ಎಂದಿದ್ದರೂ ಬಸವೇಶ್ವರ, ಗಾಂಧಿ, ಗೌತಮ ಬುದ್ಧರು ಮತ್ತು ಮಹಮದ್ ಪೈಗಂಬರ್ ಇತ್ಯಾದಿ ಶಾಂತಿಧೂತರ ಮಾರ್ಗದಲ್ಲಿ ಹೋಗಬೇಕೆಂಬ ಅಭಿಲಾಷೆಯನ್ನು ಇಟ್ಟುಕೊಂಡಿದ್ದಾರೆ ನಮಗೆ ಆ ಕ್ರಾಂತಿಯಿಂದ ಸಮಾನತೆಯನ್ನು ರಷ್ಯಾದಲ್ಲಿ ಲೆನಿನ್ ಪಡೆದಂತೆ ಪಡೆಯತಕ್ಕ ಇಚ್ಛೆಯಿಲ್ಲ. ಈ ಅಸಮಾನತೆಗಳನ್ನು ಕ್ರಾಂತಿಯಿಂದ ತೊಡೆದು ಹಾಕಬೇಕೆಂಬ ಅಭಿಪ್ರಾಯ ನಮಗಿದ್ದರೆ ನಾವೆಂದೋ ಕಮ್ಯೂನಿಸ್ಟರಾಗಿಬಿಡುತ್ತಿದ್ದೆವು.........

ಶ್ರೀ ಕೋಣಂದೂರು ಲಿಂಗಪ್ಪ.— ಕ್ರಾಂತಿಯಿಂದಲೇ ಎಲ್ಲವೂ ಲಭಿಸುತ್ತವೆಂಬ ಭ್ರಾಂತಿ ಮಾನ್ಯ ಸಚಿವರಿಗಿದ್ದರೆ ಅವರೂ ಕೂಡ ಕಮ್ಯೂನಿಸ್ಟರಾಗಬಹುದಲ್ಲ ? ಅವರು ಅದನ್ನ ಒಂದು ದೊಡ್ಡ ತತ್ವ ಎಂದು ತಿಳಿದಿದ್ದಾರೇನು ? ಅದನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ.........

ಶ್ರೀ ಎನ್. ರಾಚಯ್ಯ.—ನಾನು ಹೇಳಿದ್ದನ್ನು ತಾವು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ನಾನು ರಷ್ಯಾ, ಇಂಗ್ಲೆಂಡ್—ಎಲ್ಲಾ ದೇಶಗಳನ್ನೂ ನೋಡಿಕೊಂಡು ಬಂದಿದ್ದೇನೆ. ನನಗೆ ಎಲ್ಲಾ ವಿಷಯಗಳೂ ಗೊತ್ತಿದೆ.........

ಶ್ರೀ ಕೆ. ಎಚ್. ಹನುಮೇಗೌಡ.— ತಮಗೆ ಎಲ್ಲವೂ ಗೊತ್ತಿದೆ. ಆದರೆ ಆಚರಣೆಯಲ್ಲಿ ಮಾತ್ರ ಇಲ್ಲ. ಬಾಯಲ್ಲಿ ಎಲ್ಲಾ ಗೊತ್ತಿದೆ ಎಂದು ಹೇಳಬಹುದು......

ಶ್ರೀ ಎನ್. ರಾಚಯ್ಯ.— ನಾನು ಮುಂದಿನ ಸಲ ಈ ವಿಧಾನ ಸಭೆಯ ಚುನಾವಣೆಗೆ ನಿಲ್ಲುತ್ತೇನೆ. ಆಗ ಇಲ್ಲಿ ತಾವು ಬಂದು ನೋಡಿ ಹಿಂದುಳಿದ ವರ್ಗದವರಿಗೆ ಒಂದೂ ಓಟ್ ಹೋಗದಂತೆ ನಾನು ಕೇಳುತ್ತೇನೆ, ಈ ಮಾನ್ಯ ಸದಸ್ಯರು ಎಂದು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹರಿಜನರ ಏಳಿಗೆ ಬಗ್ಗೆ ಹೋರಾಟ ಮಾಡಿದ್ದಾರೆ ? ಮಾನ್ಯ ದೊಡ್ಡ ತಿಮ್ಮಯ್ಯನವರು ೧೫ ವರ್ಷಗಳ ಕಾಲ ಪಾರ್ಲಿಯಮೆಂಟಿನ ಸದಸ್ಯರಾಗಿದ್ದವರು—ಅಂಥವರು ಏಕೆ ನಮ್ಮನ್ನೆಲ್ಲಾ ಮುಸಲ್ಮಾನರ ಮತಕ್ಕೆ ಸೇರಬೇಕೆಂದು ಹೇಳಿದರು ? ಆದರೆ ನಾವು ಇಲ್ಲಿ ೩೧ ಜನ ಸದಸ್ಯರಿದ್ದೇವೆ. ನಾವು ಎಂದಿದ್ದರೂ ಹಿಂದೂ ಮತಕ್ಕೆ ಸೇರಿದವರು. ನಾವು ಎಲ್ಲ ವಿಷಯಗಳಲ್ಲೂ ಎಷ್ಟೇ ಹಿಂದಕ್ಕೆ ಬಿದ್ದಿರಲಿ—ನಾವು ಹಿಂದುಗಳೇ. ಮೊದಲಿಂದಲೂ ಈ ಹರಿಜನರು ಹಿಂದೂ ಧರ್ಮವನ್ನು ಅಪ್ಪಿ ನಾಶವಾಗಿದ್ದರೂ ಅವರು ಆ ಮತದಿಂದಲೇ ಉದ್ಧಾರವಾಗಬೇಕೆಂದು ಹೇಳತಕ್ಕವರು ಆ ಜನರು. ಆದುದರಿಂದ ಎಷ್ಟೇ ಕಷ್ಟಬರಲಿ ಈ ಈ ಹಿಂದೂ ಧರ್ಮವನ್ನು ನಾನು ಎತ್ತಿ ಹಿಡಿಯುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡುತ್ತೇನೆ ಇಲ್ಲೇ ಒಬ್ಬ ಮಾನ್ಯ ಸದಸ್ಯರು ಕೇಳಿದರು ಈ ಹರಿಜನರಲ್ಲೂ 'ಹರಿಜನ ಕ್ರೈಸ್ತರು—ಹರಿಜನ ಮುಸಲ್ಮಾನರೂ ಇಲ್ಲವೇ ಎಂದು.........

ಶ್ರೀ ಎಸ್. ಹಮೀದ್ ಷಾ.— ಅದು ಸುಳ್ಳು. ಅದು ಸರಿಯಾದ ಅಭಿಪ್ರಾಯವಲ್ಲ. ಅದು ತಪ್ಪುಕಲ್ಪನೆ.

ಶ್ರೀ ಎನ್. ರಾಚಯ್ಯ.—ಮಾನ್ಯ ಹಮೀದ್ ಷಾ ಅವರು ಹೇಳತಕ್ಕ ಮಾತಿನಲ್ಲಿ ನನಗೆ ಮಾನ್ಯತೆ—ಪೂಜ್ಯತೆ ಇದೆ. ಆದರೆ ಈ ಹರಿಜನರಿಗೆ ಕೆಲವು ಕೋಮುಗಳವರು ಆಶೆ ಆಕಾಂಕ್ಷೆಗಳನ್ನು ತೋರಿಸಿ ತಮ್ಮ ಮತವನ್ನು ಹೆಚ್ಚು ಮಾಡಿಕೊಳ್ಳಲು ಅವರ ಮತಗಳಿಗೆ ಸೇರಿಸಿಕೊಂಡಿದ್ದಾರೆ. ನಾನು ಇಂಥಾದ್ದನ್ನು ನಿಜವಾಗಿಯೂ ಸಹಿಸತಕ್ಕವನಲ್ಲ. ಸರ್ಕಾರ ಕೂಡ ಇದಕ್ಕೆ ಅವಕಾಶ ಕೊಡುವುದಿಲ್ಲ ನಾನು ಮೊನ್ನೆ ರಾಯಚೂರಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ನನ್ನ ಕಾರು ಕೆಟ್ಟು ಹೋಯಿತು. ಆಗ ನನಗೆ ಅಲ್ಲಿ ಬಾಯಾರಿಕೆ ಆದುದರಿಂದ ಪಕ್ಕದಲ್ಲೇ ಇದ್ದ ಹಳ್ಳಿಗೆ ಹೋಗಿ ಅಲ್ಲಿದ್ದ ಜನರನ್ನು ನೀರು ಕೇಳಿದಕ್ಕೆ ತಂದು ಕೊಟ್ಟರು. ಅವರು ಕೊಟ್ಟ ನೀರು ಸಾಲದೆ ಇದ್ದ ಕಾರಣ ಮತ್ತೆ ೩-೪ ಸಾರ್ತಿ ನೀರನ್ನು ಕೇಳಬೇಕಾಯಿತು. ಆಗ ಆ ಜನರು ಹೇಳಿದರು ಇನ್ನು ನೀರು ಇಲ್ಲಿ ಸಿಕ್ಕುವುದಿಲ್ಲ- ನಮಗೆ ನೀರಿನ ತೊಂದರೆ ಬಹಳ ಇದೆ ಎಂದು ಹೇಳಿಬಿಟ್ಟರು. ಆಗ ನಾನು ಅಲ್ಲಿ ಹಾಕಿದ್ದ ಗುಡಿಸಲುಗಳನ್ನು ನೋಡಿ ಈ ಗುಡಿಸಲುಗಳಲ್ಲಿ ಯಾರಿದ್ದಾರೆ ? ಇಲ್ಲಿ ಎಷ್ಟು ಜನ ಇದ್ದಾರೆ ಎಂದು ಕೇಳಿದೆ. ಅಲ್ಲಿ ಒಟ್ಟು ೮೦ ಮನೆಯವರಿದ್ದರು ಎಲ್ಲರೂ ಹರಿಜನರು. ಆಗ ನಾನು ಹರಿಜನರಲ್ಲಿ ನೀವು ಯಾವ ವರ್ಗಕ್ಕೆ ಸೇರಿದವರೆಂದು ಕೇಳಿದೆ, ಅವರೆಲ್ಲರೂ ಮಾದಿಗರೆಂದು ಹೇಳಿದರೂ ಅಲ್ಲೇ ಪಕ್ಕದಲ್ಲಿ ಒಂದು ಚರ್ಚ್ ಕಾಣಿಸುತ್ತಿತ್ತು. ಆಗ

ಅದೇನು ಇಲ್ಲಿ ಚರ್ಚ್ ಇದೆಯಲ್ಲಾ ಎಂದು ಕೇಳಿದಕ್ಕೆ ನಮಗೆ ಕ್ರೈಸ್ತರು ವಿದ್ಯಾಭ್ಯಾಸಕ್ಕೆ ಸ್ವಲ್ಪ ಸಹಾಯ ಮಾಡುತ್ತಿದ್ದಾರೆ, ನಡುಗೆ ಸರ್ಕಾರದಿಂದ ಹರಿಜನರೆಂಬ ಕಾರಣದಿಂದ ಸ್ವಲ್ಪ ಗ್ರಾಂಟ್ ಹಣ ಬಂದಿತ್ತು. ಆದರೆ ಅಲ್ಲಿಯ ತಾಲ್ಲೂಕ್ ಬೋರ್ಡಿನವರು ಆ ಜನರೆಲ್ಲಾ ಕ್ರೈಸ್ತರೆಂದು ಹೇಳಿ ಆ ಹಣವನ್ನು ವಾಪಸ್ ಸರ್ಕಾರಕ್ಕೆ ಕಳುಹಿಸಿದರು ಎಂದು ಅಲ್ಲಿನ ಜನರು ಹೇಳಿದರು. ಅವರು ಹಾಗೇಕೆ ಮಾಡಿದರು ? ನಮ್ಮ ವರ್ತನೆ ಸರಿಯಾಗಿಲ್ಲದೆ ಇದ್ದುದರಿಂದಲ್ಲವೇ ? ಆದರೆ ಆ ಜನರು ಹಾಗೇಕೆ ಆ ಕ್ರೈಸ್ತರ ಮತಕ್ಕೆ ಸೇರಿದರು? ಇಲ್ಲಿ ಹಿಂದೂ ಧರ್ಮದವರು ಅವರನ್ನು ಮನುಷ್ಯರಂತೆ ಕಾಣುತ್ತಿರಲಿಲ್ಲ ಎಂಬ ಕಾರಣದಿಂದಲೇ ಅಲ್ಲವೆ ಅವರು ಹಾಗೆ ಹೊರಗೆ ಹೋದದ್ದು ಸರ್ಕಾರದವರಾದರೂ ಅವರ ಬಗ್ಗೆ ಮಾಡಿರತಕ್ಕ ನೀತಿ ನೇಮ ಗಳನ್ನು ಸರಿಯಾಗಿ ಅನುಸರಿಸುತ್ತಿದ್ದಾರೆಯೋ ಎಂದರೆ ಅದೂ ಇಲ್ಲ. ಇಂಥದ್ದನ್ನು ಇನ್ನು ಮುಂದೆ ಸರ್ಕಾರ ಸಹಿಸುವುದಿಲ್ಲ. ಮಾನ್ಯ ಕೋಣಂದೂರು ಲಿಂಗಪ್ಪನವರು ಮತ್ತು ಕಾಗೋಡು ತಿಮ್ಮಪ್ಪನವರು ಹರಿಜನರ ಉದ್ಧಾರದ ಬಗ್ಗೆ ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡತಕ್ಕ ಬಗ್ಗೆ ಹೋರಾಟ ಮಾಡು ತ್ತಿದ್ದಾರೆ. ಆದರೆ ಈಗ ಸರ್ಕಾರದವರು ೧೨ ಫೈನಾನ್ಸಿಯಲ್ ಕಾರ್ಪೊರೇಷನ್ನುಗಳನ್ನು ಓಪನ್‌ಮಾಡ ತಕ್ಕವರಿದ್ದಾರೆ. ಆ ಅನುಕೂಲವನ್ನು ಪಡೆಯಲು ಹರಿಜನರು ಮುಂದೆ ಬರಲಿ, ಅವರಿಗೆ ಜಮೀನ್ ಕೊಳ್ಳುವುದಕ್ಕೆ ಸಹಾ ಹಣವನ್ನು ಕೊಡಲು ಅದರಲ್ಲಿ ವ್ಯವಸ್ಥೆ ಮಾಡಿದೆ. ಮಾನ್ಯ ಬಸವಲಿಂಗಪ್ಪನವರು ಹರಿಜನರು ಈ ಹಿಂದೆ ಹೊರುತ್ತಿದ್ದ ನೈಟ್‌ಸಾಯಿಲನ್ನ ತಪ್ಪಿಸಿದರು. ಆದಕ್ಕಾಗಿ ಮಾನ್ಯ ಬಂಗೇರ ಯವರು ಅವರಿಗೆ ಶಾಭಾಸ್‌ಗಿರಿಯನ್ನು ಕೊಟ್ಟರು ಅವರನ್ನು ಅಮಾನುಷವಾಗಿ ಕಾಣುವುದನ್ನು ನಾನು ಒಪ್ಪುವುದಿಲ್ಲ, ಹಿಂದುಳಿದವರಿಗೆ ತಕ್ಕ ಸ್ಥಾನ ದೊರೆಯಬೇಕು. ಕೈರಾನ್‌ರವರು ಮುಖ್ಯಮಂತ್ರಿ ಗಳಾಗಿದ್ದಾಗ ಅವರು ಹರಿಜನ-ಗಿರಿಜನರ ಉದ್ಧಾರಕ್ಕಾಗಿ ಒಂದು ಸೆಸ್ ಹಾಕಿದರು. ಅದನ್ನು ಕೂಲಂ ಕಷವಾಗಿ ಪರಿಶೀಲಿಸಿ ತಮ್ಮ ಮುಂದಿಡುತ್ತೇನೆ. ಹರಿಜನ ವಿಚಾರವನ್ನು ಸರಕಾರವಾಗಲೀ ಅಥವ ಯಾವುದೇ ಮಂತ್ರಿಗಳಾಗಲೀ ಉಪೇಕ್ಷೆ ಮಾಡುವುದನ್ನು ಸಹಿಸುವುದಿಲ್ಲ, ಹಾಗೆ ಮಾಡುವುದು ಸರಿಯಲ್ಲ, ಬಸವಣ್ಣನವರು ಹೇಳಿದ ಹಾಗೆ ಹಿಂದುಳಿದವರ ಉದ್ಧಾರಕ್ಕಾಗಿ ಮನಸ್ಸುಮಾಡೋಣ, ಅವರಿಗೆ ಸರಕಾರಿ ಸೌಲಭ್ಯ ಕೊಡಿಸೋಣ. ಸರಕಾರ ಸಹಾಯ ನೀಡಿದರೂ ಕೆಲವರು ಅದು ಬೇಕಾದವರಿಗೆ ಸಲ್ಲದಂತೆ ಮಾಡುವರು. ೧೮ ಭಾಗ ಕೊಟ್ಟಿರುವುದನ್ನು ತಾಲ್ಲೂಕು ಬೋರ್ಡಿನಲ್ಲಿ ಲ್ಯಾಪ್ಸ್ ಮಾಡಿದ್ದಾರೆ. ಅನೇಕ ತಾಲ್ಲೂಕು ಬೋರ್ಡುಗಳಲ್ಲಿ ಕೊಟ್ಟ ಹಣ ಖರ್ಚುಮಾಡುವುದಿಲ್ಲ. ಹರಿಜನರಿಗೆ ವಿದ್ಯಾರ್ಥಿ ವೇತನಕ್ಕಾಗಿ ಹಣ ಕೊಟ್ಟರೆ ಅದನ್ನು ಸಂಬಳಗಾರರಿಗೆ ಅಡ್ಜಸ್ಟ್ ಮಾಡಿದ್ದಾರೆ. ಸಿನೀಮಾಗಳಿಗೆ ೫೦ ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಡುವರು. ಹಾಗಿರುವಾಗ ಹರಿಜನರಿಗೆ ಕೊಟ್ಟಿರುವುದೇನು ? ಬೇರೆಯವರು ಸಹಕಾರ ಸಂಘಗಳಿಂದ ಕೋಟಿಗಟ್ಟಲೆ ಸಬ್ಸಿಡಿ ಪಡೆಯುವರು. ಪಂಚಾಯತಿಗಳಲ್ಲೂ ಕೊಟ್ಟಿದ್ದನ್ನು ಕೊಟ್ಟ ಉದ್ದೇಶಕ್ಕೆ ಖರ್ಚುಮಾಡುವುದಿಲ್ಲ ಹರಿಜನರಿಗೆ ಕೊಟ್ಟ ಹಣ ಅವರಿಗಾಗಿ ಖರ್ಚಾಗದೆ ಇದ್ದರೆ ಕ್ರಮ ತೆಗೆದುಕೊಳ್ಳಬೇಕು. ನಾನು ವ್ಯವಸಾಯ ಶಾಖೆಯ ಮಂತ್ರಿ ಆಗಿದ್ದಾಗ ಕೋಟಿಗಟ್ಟಲೆ ಹಣವನ್ನು ಸಾಯಿಲ್ ಕನ್‌ಸರ್ವೇಷನ ಗೆ ತೆಗೆದುಕೊಂಡು ಬೇರೆ ಕೆಲಸಕ್ಕೆ ಉಪಯೋಗ ಮಾಡಿಕೊಂಡಿ ದ್ದಾರೆ. ಸಹಕಾರ ಸಂಘ ಮಾಡಿಕೊಂಡು ಸಂಬಂಧಪಟ್ಟ ಅಧಿಕಾರಿಗಳಿಂದ ಶಿಫಾರಸು ಬಂದು ಡೈರೆಕ್ಟರು ಮಂಜೂರು ಮಾಡಿದ್ದಾರೆ, ಹಾಸ್ಟಲು ಕಟ್ಟಡಗಳಿಗೆ ಪ್ಲಾನು, ಅಂದಾಜು ಇದ್ದು ಕ್ರಮವಾಗಿದ್ದರೆ ಮಾತ್ರ ಸರಕಾರ ಸಹಾಯ ಮಾಡುವುದು. ಒಂದು ಲಕ್ಷಕ್ಕಿಂತ ಕಡಿಮೆ ಹಣ ಗ್ರಾಂಟು ಮಾಡಬೇಕಾದರೆ ಡೈರೆಕ್ಟರಿಗೆ ಅಧಿಕಾರವಿದೆ, ಅದರ ಪ್ರಕಾರ ಮಾಡಿದ್ದಾರೆ. ಸಿಕ್ಕಾಪಟ್ಟೆ ಕೊನೆಯ ದಿವಸ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ, ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ತಿಮ್ಮಪ್ಪನವರು ಹೇಳಿದಹಾಗೆ ಇನ್‌ಸೆಂಟಿವ್ ಬಗ್ಗೆ ಒಂದು ಯೋಜನೆ ಮಾಡಿದ್ದಾರೆ, ವಿದ್ಯಾರ್ಥಿ ವೇತನವನ್ನು ಹರಿಜನ—ಗಿರಿಜನರು ಯಾರು ಶಾಲೆಗಳಿಗೆ ಹೋಗುವರೋ ಅವರಿಗೆ ೫ ರೂಪಾಯಿಗಳಂತೆ ಕೊಡಬೇಕೆಂದಿದ್ದೇವೆ. ೧೫—೨೦ ದಿವಸಗಳಲ್ಲಿ ತಾಲ್ಲೂಕು ಬೋರ್ಡಿಗೆ ಆರ್ಡರನ್ನು ಕಳಿಸುವರು. ೧೮ ಪರ್ಸೆಂಟ್ ನೆಟ್ ಬಜೆಟ್ಟಿನಲ್ಲಿ ಎಂದು ಮಾನ್ಯ ಸದಸ್ಯರು ಹೆಗರೆಯವರಿರಬೇಕು ಹೇಳಿದರು, ಅದು ಸರಿಯಲ್ಲ. ಇಲಾಖೆ ತಪ್ಪು ಮಾಡಿದೆ. ಮಲ್ಲಿಕಾರ್ಜುನಸ್ವಾಮಿಯವರ ಕಾಲದಲ್ಲಿ ಜನರಲ್ ಬಜೆಟ್ಟಿನಲ್ಲಿ ಸೇಕಡ ೧೮ ಎಂದಿತ್ತು ಕ್ಯಾಬಿನೆಟ್ಟಿನಲ್ಲಿ ತೀರ್ಮಾನ ಮಾಡುವುದೇ ಒಂದು, ಮುಖ್ಯ ಕಾರ್ಯದರ್ಶಿಗಳು ಬರೆದುಕೊಳ್ಳುವುದೇ ಒಂದು, ಇದನ್ನು ಹಿಂದೆ ನಾನು ನೋಡಿದ್ದೇನೆ.

ಶ್ರೀ ಪಿ. ಪಿ. ಹೆಗರೆ.—ಪಂಚಾಯತಿಗಳಿಗೆ ಇತ್ತೀಚೆಗೆ ಕೊಟ್ಟಿದ್ದಾರೆ. ಆದರೆ "which are financially sound" ಎಂದಿದೆ, ಅದನ್ನು ತೆಗೆಯಬೇಕು.

SRI N. RACAIAH :—I have given instructions to the Secretary to remove those words and add words "18% of the budgeted amount"

(ಶ್ರೀ ಎನ್. ರಾಚಯ್ಯ)

and not net amount. ಈ ರೀತಿ ಅದನ್ನು ಸರಿಪಡಿಸಿದ್ದೇವೆ, ಅದರ ಬಗ್ಗೆ ಆರ್ಡರು ಇಷ್ಯೂ ಆಗುವುದು, ಪಂಚಾಯತಿಗಳಿಗೂ ಆ ಆರ್ಡರು ಅನ್ವಯಿಸುವುದು. ಬಸವಲಿಂಗಪ್ಪನವರಿದ್ದಾಗ ಮುನಿಸಿಪಾಲಿಟಿಗಳಿಗೂ ಸಹ ಇದನ್ನು ಮಾಡಿದ್ದಾರೆ. ಬಂಗೇರ ರವರು ಕೆಲವರು ಮಣೆ ಹಾಕಿಕೊಳ್ಳುವರು, ಅವರು ಹರಿಜನರಿಗಿಂತ ಕಡೆಯಾಗಿದ್ದಾರೆ ಎಂದು ಮುಂತಾಗಿ ಹೇಳಿವರು, ಅವರು ಬಹಳ ಮುಖ್ಯವಾದ ವಿಚಾರವನ್ನು ಸರಕಾರದ ಮುಂದಿಟ್ಟಿದ್ದಾರೆ, ಅದನ್ನು ಒಪ್ಪುತ್ತೇನೆ. ಅದರ ಬಗ್ಗೆ ಶೀಘ್ರ ಕ್ರಮ ತೆಗೆದು ಕೊಂಡು ಎಂಜಲೆಲೆಯಲ್ಲಿ ಅನ್ನ ತಿನ್ನುವುದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಹೆಚ್ಚು ಸೌಲಭ್ಯ ಸಮಾಜ ಕಲ್ಯಾಣ ಇಲಾಖೆಯಿಂದ ಕೊಡಿಸುತ್ತೇವೆ.

ಇನ್ನು ಹಿಂದುಳಿದ ವರ್ಗದ ವಿಚಾರ. ಅನೇಕ ಸಮಸ್ಯೆಗಳಿವೆ, ಅವು ತಮಗೆ ಗೊತ್ತಿವೆ. ಹಾವನೂರು ಆಯೋಗವಿದೆ, ಅದು ಪಟ್ಟಿ ಕೊಡುವುದು, ಯಾರು ಹಿಂದುಳಿದಿದ್ದಾರೆಂಬುದು ಅದರಿಂದ ಗೊತ್ತಾಗುವುದು. ಅದರ ಆಧಾರದಮೇಲೆ ಇರುವ ಲೋಪವನ್ನು ಸರಿಮಾಡಲಾಗುವುದು. ಯಾರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದಾರೆ ಅವರಿಗೆ ಸಹಾಯ ನೀಡಬೇಕು. ಈ ಮೂರು ಅಂಶಗಳಿಗೂ ರಾಜ್ಯಾಂಗದಲ್ಲಿ ಬೆಲೆಯಿದೆ. ಅದನ್ನು ಬಿಟ್ಟು ಹಿಂದೆ ಸರಕಾರ ಆರ್ಥಿಕ ವಿಷಯವನ್ನು ಆಧಾರವಾಗಿಟ್ಟುಕೊಂಡಿತ್ತು, ಅದು ಅಕ್ರಮ ರಾಜ್ಯಾಂಗಕ್ಕೆ ವಿರುದ್ಧವಾದುದು, ಅದನ್ನು ಒಪ್ಪುವುದಿಲ್ಲ. ಅದನ್ನು ರದ್ದುಮಾಡಿದರೂ ಯಾವ ಜಾತಿಯವರು ಹಿಂದುಳಿದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ, ಅದಕ್ಕಾಗಿ ಆಯೋಗವನ್ನು ರಚಿಸಿದ್ದಾರೆ, ಅದರಿಂದ ಇಂಟರಿಂ ವರದಿ ಕೇಳಬೇಕೆಂದಿದ್ದಾರೆ, ಈಗ ಅದರ ವರದಿ ಬಾರದಿದ್ದರೂ ಒಂದು ವರ್ಷದಲ್ಲಿ ಬರಬಹುದು. ಆ ಆಯೋಗಕ್ಕೆ ಹೆಚ್ಚು ಕಾಲಾವಧಿ ಕೊಡಲು ಕಾರಣವಿದೆ. ಕೇರಳದಲ್ಲಿ ೪ ವರ್ಷ ತೆಗೆದುಕೊಂಡಿದ್ದಾರೆ. ಸಾಕಾದಷ್ಟು ಸಮಯ ಬೇಕು, ಕಾರಣ ಎಲ್ಲರೂ ಒಪ್ಪುವ ರೀತಿಯಲ್ಲಿ ವರದಿ ಸಲ್ಲಿಸಬೇಕು ಎಂಬ ಆಸೆಯಿದೆ ಅಡ್‌ಹಾಕ್ ಸರ್ವೆ ಕಳೆದ ವರ್ಷ ಮಾಡುವುದಕ್ಕಾಗದೆ ಈಗ ಮಾಡುತ್ತಿದ್ದಾರೆ. ಪ್ರತಿಯೊಂದು ಜನಾಂಗದಲ್ಲೂ ಯಾರು ಆರ್ಥಿಕವಾಗಿ, ಸಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಎಂದು ಸರ್ವೆಮಾಡಲು ಆಜ್ಞೆಯಾಗಿದೆ, ಇದಕ್ಕೆ ಸಿಬ್ಬಂದಿ ಮಂಜೂರಾಗಿದೆ ಪರಿಶೀಲಿಸಿ ವರದಿ ಸಲ್ಲಿಸುವವರು ಬ್ಯಾಕ್‌ವರ್ಡ್ ಕ್ಲಾಸ್ ವಿಚಾರ ಸುಪ್ರೀಂ ಕೋರ್ಟಿನ ಮುಂದಿದೆ ತೀರ್ಮಾನ ಕೊಡುವರು. ಹಿಂದುಳಿದವರಿಗೆ ರಕ್ಷಣೆಯಿದೆ, ಅವರಿಗೆ ಶಿಕ್ಷಣ, ಉದ್ಯೋಗ ಮುಂತಾದುವುಗಳಲ್ಲಿ ರಿಯಾಯಿತಿ ಇದೆ. ಅಸ್ಪೃಶ್ಯರು, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಮುಂತಾದವರ ಬಗ್ಗೆ ಹಾವನೂರು ಆಯೋಗ ತನ್ನ ವರದಿಯಲ್ಲಿ ಪಟ್ಟಿ ಕೊಡುವುದು. ಕೆಲವರು ನಮ್ಮಮೇಲೆ ಕೆಲವು ಜಾತಿಯವರನ್ನು ಎತ್ತಿಕಟ್ಟುತ್ತಾ ಇದ್ದಾರೆ. ಹತ್ತು ಸಾವಿರ ವರ್ಷಗಳಿಂದ ಹೀಗೆ ಮಾಡಿರಬಹುದು, ಸಾರ್ವಜನಿಕ ಹಣವನ್ನು ಜಾತಿವಾದಿಗಳು ತಮ್ಮ ಸಂಸ್ಥೆಗಳಿಗೆ ಉಪಯೋಗ ಮಾಡಿಕೊಂಡಿದ್ದಾರೆ. ಹರಿಜನರು ಕೊಟ್ಟ ಎಜುಕೇಷನ್ ಸೆಸ್ ತೆಗೆದುಕೊಂಡು ಕಾಲೇಜು ಮಾಡಿರುವರು. ಯಾರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವವರ ಪಟ್ಟಿಗೆ ಸೇರುವುದಿಲ್ಲ ಅವರಿಗೇ ಒಂದು ಪಟ್ಟಿ ಮಾಡಬೇಕೆಂಬುದು ನಮ್ಮ ಆಶಯ. ಭಾರತ ದೇಶದಲ್ಲಿ ಇದನ್ನು ಯಾರೂ ಮಾಡಿಲ್ಲ. ಟ್ರೈಬಲ್ ಕ್ಯಾರೆಕ್ಟರ್, ಕ್ಯಾಸ್ಟ್ ಸ್ಟಿಗ್ಮ, ಸೋಷಿಯಲ್ ಅಂಡ್ ಎಜುಕೇಷನಲ್ ಬ್ಯಾಕ್‌ವರ್ಡ್‌ನೆಸ್— ಇದು ಕ್ರೈಟೀರಿಯ ಯಾವ ಧರ್ಮಕ್ಕೆ ಸೇರಿರಲಿ, ಡೆಸ್ಟಿಟ್ಯೂಟ್ಸ್ ಆದರೂ ಕೂಡ ರಾಜ್ಯಾಂಗದ ೪೬ ನೆಯ ಆರ್ಟಿಕಲ್ ಪ್ರಕಾರ ಶಿಕ್ಷಣ ಸೌಲಭ್ಯ ಮತ್ತು ಆರ್ಥಿಕ ಸೌಲಭ್ಯ ಅಂಥ ಬಡವರಿಗೆ ಕೊಡಬೇಕು. ಈ ಮೂರು ವರ್ಗದ ಬಡವರಿಗೆ ಏನೇನು ಸೌಲಭ್ಯವಿದೆಯೋ ಅದನ್ನು, ಆರ್ಥಿಕ ಆಧಾರದಮೇಲೆ ಎಕನಾಮಿಕ್ ಕ್ರೈಟೀರಿಯ ನೋಡಿ ಹಿಂದಿನ ಸರಕಾರ ಸಹಾಯಮಾಡಿರುವ ಹಾಗೆ ಅದನ್ನು ಯಾರು ಈ ವರ್ಗಕ್ಕೆ ಸೇರುವುದಿಲ್ಲವೋ ಅಂಥ ಬಡವರಿಗೂ ಕೂಡ ಕೊಡಬೇಕು, ಆರ್ಥಿಕ ಆಧಾರದಮೇಲೆ ಇತರರಿಗೆ ಕೊಡುವ ಸೌಲಭ್ಯ ಒದಗಿಸಬೇಕು ಎಂಬ ಮನಸ್ಸು ಸರಕಾರಕ್ಕಿದೆ. ಡೆವಲಪ್‌ಮೆಂಟ್ ಇಲಾಖೆಯ ಮಂತ್ರಿಗಳ ಸಮ್ಮೇಳನದಲ್ಲಿ ಇದನ್ನು ಕರ್ನಾಟಕದ ಮಂತ್ರಿಗಳು ಹೇಳಿದಾಗ ಎಲ್ಲರೂ ಮೆಚ್ಚಿದರು, ಇದು ಹೊಸ ಐಡಿಯ ಮಂತ್ರಿಗಳೂ ಹೇಳಿದ್ದಾರೆ, ಇದನ್ನು ಎಂದು ಕಾಶ್ಮೀರದ ಒಪ್ಪುವುದಾಗಿ ಎಲ್ಲರೂ ಹೇಳಿದ್ದಾರೆ. ಹಿಂದುಳಿದ ವರ್ಗಗಳ ಪಟ್ಟಿ ಬಂದ ಮೇಲೆ ಅದರ ಜೊತೆಗೆ ಆರ್ಥಿಕಾಧಾರದ ಮೇಲೆ ಯಾರು ಹಿಂದುಳಿದಿದ್ದಾರೆ, ಯಾವ ವರ್ಗದ ಜನ ಅವರು ಶ್ರೇಷ್ಠ ಜಾತಿಯವರಾಗಿರಬಹುದು, ಅವರಲ್ಲಿ ೯೯ ಪರ್ಸೆಂಟ್ ಜನ ಮುಂದೆ ಬಂದಿರಬಹುದು ಅವರಲ್ಲಿ ಒಬ್ಬ ಹಿಂದುಳಿದಿದ್ದರೂ ಆ ಒಬ್ಬ ಪೌರ ಕಾರ್ಮಿಕನಿಗೂ ಅನುಕೂಲ ಮಾಡಿಕೊಡಬೇಕು. ಮುಂದುವರಿದ ವರ್ಗಗಳಲ್ಲಿ ಕೂಡ ಯಾರು ಹಿಂದೆ ಬಿದ್ದಿದ್ದಾರೆ ಒಬ್ಬ ಹೆಂಗಸಾಗಲೀ, ಮಗುವಾಗಲೀ ಎಲ್ಲರಿಗೂ ಅನುಕೂಲ ಸಿಕ್ಕಬೇಕು ಎನ್ನುವ ನಿರ್ದಿಷ್ಟವಾದ ಯೋಜನೆ ಮಾಡುತ್ತೇವೆ. ಇದೇ ನಿಜವಾದ ಗರೀಬಿ ಹಠಾವೋ ಯೋಜನೆ.

ಹರಿಜನ ಗಿರಿಜನರ ಸಮಸ್ಯೆಯ ವಿಚಾರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಜೀತ ಪದ್ಧತಿ. ನಾನು ಲಾ ಸೆಕ್ರೆಟರಿಯವರಿಂದ ಒಂದು ನೋಟ್ ಕೂಡ ತರಿಸಿದ್ದೇನೆ.

11-30 A. M.

Prohibition of forced labour is one of the fundamental rights guaranteed by the Constitution under Art. 23. It is not a Directive principle. It is not an obligatory duty. But it is a fundamental duty of the Government to recognise this Article and they must have brought forward a legislative measure to this effect.

ಈಗ ಕೇಂದ್ರ ಸರ್ಕಾರದವರು ಈ ದಿಶೆಯಲ್ಲಿ ಒಂದು ಕಾನೂನು ಮಾಡಬೇಕು. ಅಸ್ಪೃಶ್ಯತಾ ನಿವಾರಣಾ ಕಾನೂನು ಯಾವ ರೀತಿಯಲ್ಲಿ ಮಾಡಿದ್ದಾರೆಯೋ ಅದೇ ರೀತಿಯಲ್ಲಿ ಒಂದು ಕಾನೂನು ಮಾಡಬೇಕಾಗಿದೆ. ಇಂಥ ಕಾನೂನನ್ನು ರಾಜ್ಯ ಮಟ್ಟದಲ್ಲಿಯೇ ಮಾಡಬಹುದು ಎಂದು ಕಾನೂನು ಇಲಾಖೆಯವರು ಅಭಿಪ್ರಾಯ ಪಟ್ಟು ನಾವೇ ಮಾಡಬಹುದು ಎಂದು ಹೇಳಿದರೆ ಬಹು ಜರೂರಾಗಿ ಕಾನೂನು ಮಾಡುವುದಕ್ಕೆ ನಾನು ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳುತ್ತೇನೆನ್ನುವ ಭರವಸೆಯನ್ನು ಕೊಡುತ್ತೇನೆ. ಒಂದು ವೇಳೆ ಆ ರೀತಿಯಾಗಿ ಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೆ ಮುಂದಿನ ಸಾರಿ ಡೆಲ್ಲಿಗೆ ಭೇಟಿ ಕೊಟ್ಟಾಗ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿ ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮಟ್ಟದಲ್ಲಿ ಕಾನೂನು ಮಾಡಬೇಕು ಎಂದು ಹೇಳುತ್ತೇನೆ. ಈ ನೋಟ್‌ನಲ್ಲಿರುವುದನ್ನು ಓದಿದರೆ ಒಳ್ಳೆಯದು ಎಂದು ಕಾಣುತ್ತದೆ.

> "Contravention is punishable. Prohibition of the system is recognised as fundamental. Forced labour is of several types. The commonest form prevailing in most part of our State is 'Jeeta system'. Under this system compulsory service is insisted in return to a debt said to have been advanced. It is well known this so called debt is a pretext and the sum involved is only nominal and aften illusory also. Livelong labour is extracted and in several cases this continues from generation to generation. In other words it is perpetual The clutches of the creditors are so tight that the victim can hardly escape Exploitation is total. Most of the victims are Harijans. Their economic helplessness is exploited. The practice is devoid of all human decency and every effort should be made to stop this exploitation. This must be done through improving their economic condition."

ಈ ದಿಸೆಯಲ್ಲಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇನೆ.

ಅಗ್ರಿಕಲ್ಚರಲ್ ಕಾಲೋನಿಗಳ ವಿಚಾರ ಹೇಳಿದರು. ನಾನು ಹಿಂದೆ ಮಂತ್ರಿಯಾಗಿದ್ದಾಗ ಅನೇಕ ಕಾಲೋನಿಗಳನ್ನು ಮಾಡಿ ಲಕ್ಷಾಂತರ ಎಕರೆ ಜಮೀನನ್ನು ಕೊಟ್ಟಿದ್ದೇವೆ. ಅವರಿಗೆ ಕೆಲವು ಸೌಲಭ್ಯಗಳನ್ನು ಕೊಟ್ಟು ಅವರು ಅದರಿಂದ ಜೀವನ ಮಾಡುತ್ತಿದ್ದಾರೆ. ಅವರಿಗೆಲ್ಲ ಒಂದು ಉದ್ಯೋಗವನ್ನು ಕಲ್ಪಿಸಿ ಕೊಟ್ಟಿದ್ದೇವೆ. ಪ್ರತ್ಯೇಕ ಊರನ್ನು ಮಾಡುವುದರಲ್ಲಿ ಅರ್ಥವಿಲ್ಲ. ವ್ಯವಸಾಯದ ಕಾಲೋನಿಗಳನ್ನು ಮಾಡೋಣ. ಆದರೆ ಹರಿಜನರನ್ನು ಪ್ರತ್ಯೇಕವಾಗಿ ಇಡಬೇಕು ಎನ್ನುವ ಮಾತು ಸರಿಯಲ್ಲ. ಹರಿಜನರೂ ಮತ್ತು ಇತರರೂ ಒಂದೇ ಕಡೆ ಇರುವಂತೆ ಸೈಟುಗಳನ್ನು ಕೊಟ್ಟು ಅವರಿಗೆ ಮನೆಗಳನ್ನು ಕಟ್ಟಿಸಿಕೊಡೋಣ ಏನೇನು ಸೌಲಭ್ಯಗಳು ಬೇಕೋ ಅದನ್ನೆಲ್ಲ ಕೊಡೋಣ, ಕೈಗಾರಿಕೆಗಳನ್ನು ಮಾಡೋಣ. ಹರಿಜನರಿಗೇ ಒಂದು ಕೈಗಾರಿಕಾ ಎಸ್ಟೇಟ್ ಮಾಡಿ ಕಾಟೇಜ್ ಮತ್ತು ಸಣ್ಣ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು ಮಾಡಿ ನಾಲ್ಕಾರು ಕಡೆ ಏಕೆ ಪ್ರಯೋಗ ಮಾಡಬಾರದು ಎನ್ನುವುದು ಕೂಡ ಸರ್ಕಾರದ ಮನಸ್ಸಿನಲ್ಲಿದೆ. ಹೆಚ್ಚು ಹೆಚ್ಚು ಗೃಹ ಕೈಗಾರಿಕೆಗಳು ಮತ್ತು ಅಗ್ರೋ ಇಂಡಸ್ಟ್ರೀಸ್, ಸಣ್ಣ ಪುಟ್ಟ ಕೈಗಾರಿಕೆಗಳು ಹಾಗೂ ಲೆದರ್ ಇಂಡಸ್ಟ್ರೀಸ್ ಮಾಡಬೇಕೆಂದು ಉದ್ದೇಶವಿದೆ. ಲೆದರ್ ಇಂಡಸ್ಟ್ರೀಸ್‌ಗೆ ಹಣಕಾಸಿನ ಸಹಾಯ ದೊರೆಯುತ್ತಿರಲಿಲ್ಲ. ಅದಕ್ಕೆ ಸರ್ಕಾರದ ರಕ್ಷಣೆ ಇರಲಿಲ್ಲ. ಲೆದರ್ ವರ್ಕರ್ಸ್‌ಗೆ ಅಗ್ರಿಕಲ್ಚರಲ್ ವರ್ಕರ್ಸ್‌ಗಿಂ

(ಶ್ರೀ ಎನ್. ರಾಚಯ್ಯ)

ಎಕ್ಸ್‌ಪ್ಲಾಯಿಟ್ ಆಗಿರುತ್ತಾರೆ. ಇದು ಬಹಳ ಪವಿತ್ರವಾದ ಕೈಗಾರಿಕೆ ಮತ್ತು ಪ್ರಾಮುಖ್ಯವಾದ ಕೈಗಾರಿಕೆ. ಮನುಷ್ಯ ಹುಟ್ಟಿದಾಗಿನಿಂದ ಬಂದಿರುವ ಕೈಗಾರಿಕೆ. ಅವನ್ನು ನಿರ್ಲಕ್ಷ್ಯ ಮಾಡಿದ್ದಾರೆ ಏಕೆಂದರೆ ಅವರು ಮುಂದೆ ಬರುವುದು ನಮಗೆ ಇಷ್ಟವಿಲ್ಲ. ಮಾನ್ಯ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾದ ಮೇಲೆ ಲೆದರ್ ಬೋರ್ಡ್ ಮಾಡಿದ್ದಾರೆ. ಅದನ್ನು ಸ್ಟಾಚ್ಯೂಟರಿ ಬೋರ್ಡ್ ಮಾಡಬೇಕೆಂದು ಸರ್ಕಾರದ ಮನಸ್ಸಿನಲ್ಲಿದೆ ಆ ಬಗ್ಗೆ ಮಸೂದೆಯೂ ತಯಾರಾಗಿದ್ದು ಅದು ಕೈಗಾರಿಕಾ ಶಾಖೆಗೆ ಹೋಗಿದೆ. ಮುಂದಿನ ಅಧಿವೇಶನದಲ್ಲಿ ಅದು ಬರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬಹಳ ಪ್ರಾಮುಖ್ಯವಾದ ಕೆಲವು ವಿಚಾರಗಳನ್ನು ಹೇಳಿದ್ದಾರೆ, ಹೊಸ ಮೈಸೂರು ದೇಶ, ಹಳೇ ಮೈಸೂರು ದೇಶ ಇಲ್ಲಿ ಆಗಿರುವಂಥ ಕೆಲವು ವ್ಯತ್ಯಾಸಗಳನ್ನು ಮಾನ್ಯ ಹೆಗಡೆ ಅವರು ಹೇಳಿದರು. ಹರಿಜನರಿಗೆ ಅನೇಕ ಸೌಲಭ್ಯಗಳನ್ನು ಆ ಕಡೆ ಕೊಟ್ಟಿಲ್ಲ ಎನ್ನುವುದು ನಿಜ ಬೊಂಬಾಯಿ ಕರ್ನಾಟಕ, ಹೈದರಾಬಾದು ಕರ್ನಾಟಕದಲ್ಲಿ ಹರಿಜನರಿಗಾಗಲೀ ಹಿಂದುಳಿದ ವರ್ಗದವರಿಗಾಗಲೀ ಆಗಿರತಕ್ಕ ಶೋಷಣೆ ಇನ್ನು ಯಾವ ಭಾಗದಲ್ಲಿಯೂ ಆಗಿಲ್ಲ. ಹತ್ತಾರು ಸಾರಿ ನಾನು ಆ ಭಾಗದಲ್ಲಿ ಪ್ರವಾಸ ಮಾಡಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯಿಂದಾಗಲೀ, ಅಭಿವೃದ್ಧಿ ಶಾಖೆಯಿಂದಾಗಲೀ, ಯಾವುದೇ ಇಲಾಖೆಯಿಂದಾಗಲೀ ಹೆಚ್ಚು ಸೌಲಭ್ಯಗಳನ್ನು ರಕ್ಷಣೆಯನ್ನು ಆ ಭಾಗದಲ್ಲಿರುವ ಬಡವರಿಗೆ, ಹರಿಜನ ಗಿರಿಜನರಿಗೆ ಒದಗಿಸುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ನೊಮ್ಯಾಡಿಕ್ ಮತ್ತು ಸೆಮಿ ನೊಮ್ಯಾಡಿಕ್ ಟ್ರೈಬ್ಸ್ ಕರ್ನಾಟಕದ ಕೆಲವು ಭಾಗಗಳಲ್ಲಿ ಇದ್ದಾರೆ. ಹಿಂದುಳಿದ ವರ್ಗಗಳ ಪಟ್ಟಿ ತಯಾರಾದ ಮೇಲೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗದ ಜನರ ಜೊತೆಯಲ್ಲಿ ಇವರನ್ನೂ ಸೇರಿಸುತ್ತಾರೆನ್ನುವ ನಂಬಿಕೆ, ವಿಶ್ವಾಸ ನನಗಿದೆ. ಆದುದರಿಂದ ಆಯೋಗದ ಪಟ್ಟಿ ಬರುವಾಗ ಯಾವ ಯಾವ ವರ್ಗದ ಜನರನ್ನು ಯಾವ ಯಾವ ಪಟ್ಟಿಯಲ್ಲಿ ಸೇರಿಸಬೇಕು, ಹಿಂದುಳಿದವರ ವರ್ಗದ ಪಟ್ಟಿಯಲ್ಲಿ ಯಾರನ್ನು ಸೇರಿಸಬೇಕು ಮತ್ತು ಉಳಿದವರನ್ನು ಯಾವ ಪಟ್ಟಿಯಲ್ಲಿ ಸೇರಿಸಬೇಕು ಎನ್ನುವುದಾದ ಮೇಲೆ. ಉಳಿದವರ ಪಟ್ಟಿಯಲ್ಲಿ ಯಾರು ಆರ್ಥಿಕವಾಗಿ ಹಿಂದೆ ಇರುತ್ತಾರೆ ಅವರು ಯಾವ ಜಾತಿಗೇ ಸೇರಿರಲ್ಲಿ, ಯಾವ ಕೋಮಿಗೇ ಸೇರಿರಲ್ಲಿ ಅವರಿಗೂ ಎಲ್ಲ ಅನುಕೂಲಗಳನ್ನೂ ಕಲ್ಪಿಸಿ ಕೊಡಬೇಕಾಗುತ್ತದೆ. ರಾಜ್ಯಾಂಗದಲ್ಲಿ ಇಂಥದನ್ನು ಮಾಡಬಾರದು ಎಂದು ಹೇಳಿಲ್ಲ. ಹಿಂದೆ ಅಧಿಕಾರದಲ್ಲಿದ್ದವರು ಕೆಲವರು ತಮ್ಮವರಿಗೆ ಅನುಕೂಲ ಮಾಡಬೇಕು ಎಂದು ಬೇರೆಯವರಿಗೆ ಮಾಡಿಲ್ಲ ಅದಕ್ಕೆ ಈ ಸರ್ಕಾರವೇ ಹೊಣೆ, ನಾವು ರಾಜೀನಾಮೆ ಕೊಡಬೇಕು ಎಂದು ಶ್ರೀ ಜಯಪ್ರಕಾಶ ನಾರಾಯಣ ಅವರು ಹೇಳುತ್ತಿದ್ದಾರೆ. ನಾನು ಬಂದು ನಾಲ್ಕು ತಿಂಗಳಾಯಿತು. ಇನ್ನು ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಏನೇನು ಮಾಡಬೇಕೆಂದು ತಿಳಿಸಿದ್ದಾರೆ ಅವನ್ನು ಕಾರ್ಯಗತ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಅಸ್ಪೃಶ್ಯತೆಯ ವಿಚಾರದಲ್ಲಿ, ನಾವು ಕುಟುಂಬ ಯೋಜನೆಯ ಬಗ್ಗೆ ಪ್ರಚಾರವನ್ನು ಯಾವ ರೀತಿಯಲ್ಲಿ ಮಾಡಬೇಕು ಎನ್ನುವ ಸಲಹೆಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ ಮಾನ್ಯ ಸದಸ್ಯರೆಲ್ಲ ಒಪ್ಪಿ ಸಾಧ್ಯವಾದಷ್ಟು ಹಣವನ್ನು ಖರ್ಚು ಮಾಡಲು ಅನುಮತಿಯನ್ನು ಕೊಟ್ಟರೆ ಪ್ರತಿ ಗ್ರಾಮದಲ್ಲಿಯೂ, ಪ್ರತಿ ಊರಿನಲ್ಲಿಯೂ, ಪ್ರತಿ ಪಟ್ಟಣದಲ್ಲಿಯೂ, ಆಕಾಶವಾಣಿ ಮೂಲಕವೂ ಪ್ರಚಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

SRI DODDATHIMMAIAH —Have you allotted any amount in the Budget for 1974-75 and also in the Five Year Plan for creating an effective prpoganda machinery to eradicate untouchability and if not, I would request the Hon. Minister to approch the Finance Minister and see that the amount is provided,

ಶ್ರೀ ಎನ್. ರಾಚಯ್ಯ —ಮಾನ್ಯ ಸದಸ್ಯರು ಏನು ಸಲಹೆ ಮಾಡಿದ್ದಾರೋ ಅದರ ಪ್ರಕಾರ ಸಾಕಾದಷ್ಟು ಹಣವನ್ನು ಅಲಾಟು ಮಾಡುತ್ತೇವೆ ಹಣವಿಲ್ಲದೆ ಇದ್ದರೆ ಫೈನಾನ್ಸ್ ಮಂತ್ರಿಗಳಿಂದ ಹಾಗೂ ಮುಖ್ಯ ಮಂತ್ರಿಗಳಿಂದಲೂ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ತಾವೇನು ಸಲಹೆಗಳನ್ನು ಕೊಟ್ಟಿದ್ದಿರೋ ಅದರಂತೆ ತಕ್ಕ ಕಾರ್ಯಕ್ರಮವನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

SRI DODDATHIMMAIAH.—You have appointed only few Propogandists which will not solve the problem

ಶ್ರೀ ಎನ್. ರಾಚಯ್ಯ.—ತಾವೇನು ಸಲಹೆ ಕೊಟ್ಟಿದ್ದೀರಿ ಅದರಂತೆ ಏಪ್ರಿಲ್ ಒಂದನೇ ತಾರೀಖಿನಿಂದ ಯಾವ ಪ್ರಾಪೋಗಾಂಡಿಸ್ಟರನ್ನೂ ನಾನು ನೇಮಕ ಮಾಡಿಲ್ಲ. ನಿಮ್ಮ ಸಲಹೆಗಳನ್ನೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಇದುವರೆಗೆ ಪ್ರಾಪೋಗಾಂಡಿಸ್ಟುಗಳು ಎಂದು ಮಾಡಿರಲಿಲ್ಲವೆ ?

ಶ್ರೀ ಎನ್. ರಾಚಯ್ಯ.—ನಾನು ಆಗಲೇ ಹೇಳಿದಂತೆ ಏಪ್ರಿಲ್ ಒಂದನೇ ತಾರೀಖಿನಿಂದ ಪ್ರಾಪೋಗಾಂಡಿಸ್ಟರನ್ನು ಅಪಾಯಿಂಟು ಮಾಡುವುದನ್ನು ರದ್ದು ಮಾಡಿದ್ದೇವೆ. ಇದರಲ್ಲಿ ಹೊಸ ರೀತಿಯಾಗಿ ಹೇಗೆ ಮಾಡಬೇಕು ಎನ್ನುವುದಕ್ಕಾಗಿ ಸ್ಟೇಟು ಅಡ್ವೈಸರಿ ಕಮಿಟಿ ಮಾಡಲಾಗಿದೆ. ಇದರಲ್ಲಿ ನಿಮ್ಮ ಸಲಹೆಗಳನ್ನು ಪಡೆದು ಅದರಂತೆ ನಿರ್ಣಯ ಮಾಡಿ ಅದನ್ನು ಮುಂದೆ ಪರಿಶೀಲಿಸೋಣ. ನೀವುಗಳು ಏನೇನು ಸಲಹೆಗಳನ್ನು ಮಾಡುತ್ತೀರೋ ಅದರಂತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳೋಣ ಮತ್ತು ಇವರ ಕಷ್ಟ ನಿವಾರಣೆ ಮಾಡುವ ಬಗ್ಗೆ ತಾವುಗಳು ಏನು ಹೇಳುತ್ತೀರೋ ಅದರಂತೆ ಅಲ್ಲಿ ವಿಚಾರ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಅಸ್ಪೃಶ್ಯತೆ ನಿವಾರಣೆ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಪಂಚಾಯತಿಗಳ ಸೆಕ್ರೆಟರಿಗಳು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು. ಆದರೆ ಕೆಲವಾರು ಗ್ರಾಮಾಂತರ ಪ್ರದೇಶಗಳಲ್ಲಿರುವ ಬಾವಿಗಳಲ್ಲಿ ನೀರು ತೆಗೆದುಕೊಳ್ಳಲು ಕೂಡ ಬಿಡುವುದಿಲ್ಲ. ಇದಕ್ಕೆಲ್ಲಾ ಕಾರಣರು ಹಳ್ಳಿಗಾಡಿನಲ್ಲಿರುವ ಪಂಚಾಯತಿಗಳು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ ನಿಮ್ಮ ನೀತಿ ಇದರಲ್ಲಿ ವಿಫಲವಾಗಿದೆ ಷೆಡ್ಯೂಲ್ ಕ್ಯಾಸ್ಟು ಜನರಿಗೆ ಸಾಕಾದಷ್ಟು ರಕ್ಷಣೆ ಕೊಡುವುದರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಗ್ರಾಮ ಪಂಚಾಯತಿಯ ವಿಚಾರದಲ್ಲಿ ಕೊನೆಯದಾಗಿ ಇಲ್ಲಿ ಹೇಳುತ್ತೇನೆ. ಈಗ ಇಲ್ಲಿ ಸೋಷಿಯಲ್ ವೆಲ್‌ಫೇರು ಇಲಾಖೆ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಈ ಇಲಾಖೆಯಲ್ಲಿ ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ನಮ್ಮ ರಾಜ್ಯಕ್ಕೆ ಸುಮಾರು ಇನ್ನೂರು ಟಿಬೆಟ್ಟಿನಿಂದ ನಿರಾಶ್ರಿತರು ಬಂದರು ಎಂದು ಇವರನ್ನು ಪುನರ್ವಸತಿಗೊಳಿಸಲು ಪ್ರತ್ಯೇಕವಾದ ಒಬ್ಬರು ಸೀನಿಯರು ಡೆಪ್ಯುಟಿ ಕಮಿಷನರು ಹಾಗೂ ಇನ್ನಿತರ ಅಧಿಕಾರಿಗಳನ್ನು ಇಲ್ಲಿ ನೇಮಿಸಿ ಇವರಿಗೆ ಲಕ್ಷಗಟ್ಟಲೆ ಹಾಗೂ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ಇವರಿಗೆ ಸಾವಿರಾರು ಎಕರೆ ಜಮೀನುಗಳನ್ನು ಕೊಟ್ಟು ಬಿಟ್ಟಿ ಊಟ ಕೂಡ ಹಾಕಿ ಇವರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಿರುವುದನ್ನು ನಾವು ಪಿರಿಯಾಪಟ್ಟಣ ಹಾಗೂ ಇನ್ನಿತರ ಕಡೆಗಳಲ್ಲಿ ನೋಡಿದ್ದೇವೆ. ಆದರೆ ಒಂದು ತಾಲ್ಲೂಕಿನಲ್ಲಿ ಸುಮಾರು ಮೂರು ನಾಲ್ಕು ಸಾವಿರ ಹರಿಜನರಿರುವ ಕಡೆಗಳಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿರುವ ಒಬ್ಬರು ರೆವೆನ್ಯೂ ಇನ್ಸ್‌ಪೆಕ್ಟರವರನ್ನು ಇಲ್ಲಿಗೆ ಹಾಕಿದರೆ ಇವರು ಎಲ್ಲ ಹರಿಜನರ ರಕ್ಷಣೆ ಹಾಗೂ ಮಾನ ರಕ್ಷಣೆ ಮಾಡಲು ಸಾಧ್ಯವೆ ? ಮತ್ತು ಇನ್ನಿತರ ಸೌಕರ್ಯಗಳನ್ನು ಕೊಡಲು ಇವರಿಗೆ ಯಾವ ಅಧಿಕಾರವೂ ಇರುವುದಿಲ್ಲ. ಹೀಗಿರುವ ಅಧಿಕಾರಿಯಿಂದ ಸರಕಾರದ ಕಾರ್ಯಗಳನ್ನು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ಕೊಡಲು ಸಾಧ್ಯ. ಇದರ ಬಗ್ಗೆ ಮಾನ್ಯ ಸದಸ್ಯರು ಕೊಟ್ಟಿರುವ ಎಲ್ಲ ಸಲಹೆಗಳೂ ನನ್ನ ಗಮನದಲ್ಲಿದೆ, ಹಾಗೂ ಸರಕಾರದವರ ಗಮನದಲ್ಲೂ ಇದೆ. ಇದಕ್ಕಾಗಿ ನಾನು ನಮ್ಮ ಇಲಾಖೆಯನ್ನು ಪೂರ್ಣವಾಗಿ ಪುನರ್ರಚನೆ ಹಾಗೂ ಪುನರ್ವ್ಯವಸ್ಥೆ ಮಾಡಬೇಕು ಎಂದಿದ್ದೇನೆ. ನಾನೇ ನಮ್ಮ ಡಿಪಾರ್ಟುಮೆಂಟ್ ರೀ ಆರ್ಗನೈಸು ಮಾಡಬೇಕೆಂದು ಈ ಶಾಸನ ಸಭೆಯ ಸಮಿತಿಯ ಅಧ್ಯಕ್ಷನಾಗಿ ಶಿಫಾರಸನ್ನು ಏನು ಮಾಡಿದ್ದೆನೋ ಅದನ್ನು ಈಗ ಮಾಡಬೇಕು ಹಾಗೂ ತಾವು ಕೊಟ್ಟಿರುವ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಜಾಗರೂಕತೆಯಿಂದ ಮಾಡಬೇಕೆಂದು ಇದ್ದೇನೆ ಮತ್ತು ಈಗಾಗಲೇ ಅದಕ್ಕಾಗಿ ಸುಮಾರು ಹದಿನಾರು ಲಕ್ಷ ರೂಪಾಯಿಗಳನ್ನು ರೀ ಆರ್ಗನೈಸೇಷನ್‌ಗಾಗಿ ಒದಗಿಸಿದ್ದೇನೆ ಮತ್ತು ನಮ್ಮ ಹಣಕಾಸಿನ ಸ್ಥಿತಿ ನೋಡಿಕೊಂಡು ಎಷ್ಟು ಸಾಧ್ಯವೋ ಅಷ್ಟು ಮಟ್ಟಿಗೆ ರಾಜ್ಯ ಮಟ್ಟದಲ್ಲಿ, ತಾಲ್ಲೂಕಾ ಮಟ್ಟದಲ್ಲಿ ಈ ವ್ಯವಸ್ಥೆಯನ್ನು ಮಾಡಬೇಕೆಂದು ಇದ್ದೇನೆ. ತಾಲ್ಲೂಕಾ ಮಟ್ಟದಲ್ಲಿ ಒಬ್ಬರು ಗೆಜೆಟೆಡ್ ಅಧಿಕಾರಿಗಳನ್ನೇ ನೇಮಕ ಮಾಡಬೇಕೆಂದು ಸರಕಾರ ತೀವ್ರವಾಗಿ ಆಲೋಚನೆ ಮಾಡುತ್ತಿದೆ, ಕನಿಷ್ಠ ಪಕ್ಷ ಒಂದು ತಾಲ್ಲೂಕಿನಲ್ಲಿ ಮೂರು ಜನ ಅಧಿಕಾರಿಗಳಿರಬೇಕು. ಜಿಲ್ಲಾ ಮಟ್ಟದಲ್ಲಿ ಒಬ್ಬರು ಸ್ಪೆಷಲ್ ಡೆಪ್ಯುಟಿ ಕಮಿಷನರವರು ದರ್ಜೆಯವರನ್ನೇ ಪ್ರತ್ಯೇಕವಾಗಿ ಷೆಡ್ಯೂಲು ಕ್ಯಾಸ್ಟು ಹಾಗೂ ಷೆಡ್ಯೂಲು ಟ್ರೈಬ್ಸ್ ಇವರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಮಾಡಬೇಕೆಂದೂ ಇದೆ. ಇದರಲ್ಲಿ ಶೇಕಡಾ ಐವತ್ತರಷ್ಟು ಗ್ರಾಂಟುಗಳನ್ನು ಕೊಡುವ ಅಧಿಕಾರವನ್ನೂ ಇವರಿಗೆ ಕೊಡಬೇಕೆಂದು ಇದೆ. ಇದರ ಬಗ್ಗೆ ನಾನು ಮಾನ್ಯ ರೆವೆನ್ಯೂ ಮಂತ್ರಿಗಳೊಡನೆ ಪ್ರಸ್ತಾಪ ಮಾಡಿ ಇವರಿಗೆ ಯಾವ ರೀತಿಯಾದ ಸ್ಥಾನಮಾನಗಳನ್ನು ಕೊಡಬಹುದು ಎಂದೂ ಯೋಜನೆ ಮಾಡುತ್ತಾ ಇದ್ದೇನೆ. ಇದಲ್ಲದೆ ಇವರ ಲಾ ಅಂಡ್ ಆರ್ಡರು ಪ್ರಾಬ್ಲಂ ಬೇರೆ ಇದೆ. ಇದನ್ನು ಪೋಲೀಸು ಇಲಾಖೆಯಿಂದ ಮಾಡುವುದಕ್ಕೆ ಬದಲು ನಮ್ಮ ಇಲಾಖೆಯ ಒಬ್ಬರು ಅಧಿಕಾರಿಗಳನ್ನೇ ಹೊಸದಾಗಿ ನೇಮಿಸಬೇಕು ಎಂದೂ ಸರಕಾರದ ಉದ್ದೇಶವಿದೆ.

SRI DODDATHIMMAIAH.—Observance of untouchability is different from harassment of Harijans. What are you going to do for preventing this harassment to the Harijans ?

ಶ್ರೀ ಎಸ್. ರಾಚಯ್ಯ.—ತಾವು ಹೇಳುವ ಪ್ರಕಾರ ಇದರ ಬಗ್ಗೆ ವಿಚಾರ ಮಾಡಿ ನಾನು ಈಗಾಗಲೇ ಚೀಫ್ ಸೆಕ್ರೆಟರಿಗಳಿಗೆ ಕೂಡ ಬರೆದಿದ್ದೇನೆ. ಈಗಿರುವ ಅಧಿಕಾರಿಗಳಿಗೆ ಲಾ ಅಂಡ್ ಆರ್ಡರು ಬಗ್ಗೆ ಕಂಟ್ರೋಲು ಮಾಡಲಾಗುವುದಿಲ್ಲ. ಇದಕ್ಕಾಗಿ ಈಗ ಇರುವ ಡೈರಕ್ಟರ ಸ್ಟೇಟಸನ್ನು ಹೆಚ್ಚು ಮಾಡಿ ಡಿವಿಜನಲ್ ಕಮಿಷನರ್‌ರವರಿಗೆ ಯಾವ ರೀತಿ ಸೂಪರ್ ಟೈಂ ಸ್ಕೇಲು ಕೊಟ್ಟಿದ್ದಾರೋ ಅದೇ ರೀತಿ ಆ ದರ್ಜೆಯ ಒಬ್ಬರನ್ನು ಡೈರೆಕ್ಟರನ್ನಾಗಿ ಮಾಡಬೇಕೆಂದು ಈಗಾಗಲೇ ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ. ಇದರ ಬಗ್ಗೆ ನನಗೆ ತಾವೂ ಕೂಡ ಒಳ್ಳೆಯ ಸಲಹೆಗಳನ್ನು ಕೊಟ್ಟಿರುವುದರಿಂದ ಅವನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಸೂಕ್ತವಾದ ರೀತಿಯಲ್ಲಿ ಪುನರ್‌ವ್ಯವಸ್ಥೆ ಮಾಡುತ್ತೇನೆ. ಅಷ್ಟೇ ಅಲ್ಲದೆ ತಾವೆಲ್ಲರೂ ಸ್ಟೇಟ್ ಲೆವೆಲ್ ಕಮಿಟಿಯಲ್ಲೂ ಇರುವುದರಿಂದ ತಾವುಗಳು ಇದರ ಬಗ್ಗೆ ಏನೇನು ಸಲಹೆಗಳನ್ನು ಕೊಡುತ್ತೀರೋ ಅದನ್ನೂ ವಿಚಾರ ಮಾಡೋಣ. ಹೆಚ್ಚಿನ ಅಧಿಕಾರಗಳನ್ನು ತಾಲ್ಲೂಕಾ ಬೋರ್ಡು ಅಧಿಕಾರಿಗಳಿಗೂ ಕೊಟ್ಟು ಎಲ್ಲಾ ತಾಲ್ಲೂಕಿನ ಪುರೋಭಿವೃದ್ಧಿ ಕಾರ್ಯಗಳನ್ನೂ ಮಾನ್ಯ ದೊಡ್ಡತಿಮ್ಮಯ್ಯನವರು ಹೇಳಿದ ಸಲಹೆಗಳನ್ನೂ ಗಮನಿಸುತ್ತೇನೆ. ಮತ್ತು ಈಗ ಕೆಲವು ಇಲಾಖೆಗಳಿಗೆ ಸೆಕ್ರಟರಿ ಕಂ ಕಮಿಷನರ್ ಎಂದು ಸೀನಿಯರ್ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಅದರಂತೆ ಇಲ್ಲೂ ಮಾಡಲು ಸಾಧ್ಯವೇ ಎನ್ನುವುದನ್ನು ನೋಡಿ ಮಾಡಬೇಕು ಮತ್ತು ಎಲ್ಲರಿಗೂ ಸೌಲಭ್ಯ ದೊರೆಯುವಂತೆ ಮಾಡಬೇಕು.

ರಕ್ಷಣೆ ವಿಚಾರದಲ್ಲಿ ಈಗಾಗಲೇ ನಮ್ಮ ಪ್ರಧಾನ ಮಂತ್ರಿಗಳು ಬರೆದಿರುವ ಸೂಚನೆಗಳು ನಮ್ಮ ಸರಕಾರಕ್ಕೆ ಬಂದಿವೆ. ಪ್ರತ್ಯೇಕವಾಗಿ ಹಾಗೂ ವಿಶೇಷವಾದ ರಕ್ಷಣೆ ಹಾಗೂ ಇತರ ಎಲ್ಲ ಸೌಲಭ್ಯಗಳನ್ನೂ ಇವರಿಗೆ ರಾಜ್ಯಾಂಗದತ್ತವಾಗಿ ಏನೇನು ಅನುಕೂಲಗಳನ್ನು ಕೊಡಬೇಕೋ ಅದನ್ನು ಅಬ್‌ಸರ್ವೆನ್ಸ್ ಆಫ್ ಅನ್‌ಟಚಬಿಲಿಟ್ ಇವುಗಳನ್ನು ಜಾರಿಗೆ ಕೊಡುವುದರಲ್ಲಿ ಇದರಲ್ಲಿ ಸೂಕ್ತವಾದ ಸಲಹೆಗಳನ್ನು ಮಾಡಬೇಕು ಎನ್ನುವ ಆದೇಶ ಕೂಡ ನಮಗೆ ಬಂದಿದೆ, ಇದು ನಮ್ಮ ಸರಕಾರಕ್ಕೆ ಈಗಾಗಲೇ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಇದನ್ನು ಒಪ್ಪುತ್ತಾರೆಂದು ಭಾವಿಸುತ್ತೇನೆ. ಇವರಿಗೆ ಪ್ರತ್ಯೇಕವಾಗಿ ಡಿ.ಐ.ಜಿ. ದರ್ಜೆಯ ಒಬ್ಬರು ಪೋಲೀಸು ಅಧಿಕಾರಿಗಳು ಇಲ್ಲವೇ ಡಿ.ವೈ.ಎಸ್.ಪಿ. ದರ್ಜೆಯ ಪೋಲೀಸು ಅಧಿಕಾರಿಗಳನ್ನೂ ಏಕೆ ಇಲ್ಲಿ ನೇಮಕ ಮಾಡಬಾರದು ಎಂದು ಯೋಚನೆ ಮಾಡುತ್ತಿದ್ದೇನೆ. ಎಲ್ಲ ಕಡೆಗಳಲ್ಲೂ ಹರಿಜನ ಹಾಗೂ ಗಿರಿಜನರ ರಕ್ಷಣೆ ಹಾಗೂ ಮಾನಹಾನಿಯ ರಕ್ಷಣೆ ಮಾಡುವುದರಲ್ಲಿ ಹಾಗೂ ಇವರಿಗಾಗುವ ದೌರ್ಜನ್ಯಗಳನ್ನು ತಡೆಗಟ್ಟಲು ಪೋಲೀಸ್ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದೂ ಯೋಚನೆ ಮಾಡುತ್ತಿದ್ದೇವೆ. ಈಗಿರುವ ಅಧಿಕಾರಿಗಳ ಕೈಯಲ್ಲಿ ಹರಿಜನರ ದೌರ್ಜನ್ಯ ಹಾಗೂ ಮಾನಹಾನಿಯನ್ನು ತಡೆಯಲು ಆಗುವುದಿಲ್ಲ. ಇದಕ್ಕಾಗಿ ಇಂತಹ ಒಂದು ಪ್ರಯತ್ನ ಮಾಡಬೇಕೆಂದು ಸರಕಾರ ಉದ್ದೇಶಿಸಿದೆ.

ಶ್ರೀ ಕೆ. ಪ್ರಭಾಕರ್—ನಾನು ಎರಡು ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಹರಿಜನರಿಗಾಗಿ ವೆಲ್‌ಫೇರ್ ಆಫೀಸರು ಎನ್ನುವವರಿಗೆ social welfare, prohibition, prostitution, psychological and physical development, beggary, problems of down trodden etc., have been entrusted. ಇಂತಹವುಗಳನ್ನು ಬೇರೆ ಒಬ್ಬರಿಗೆ ಕೊಟ್ಟು ಅವರಿಗೆ ಬೇಕಾಗುವ ಹಣ ಕೊಡುವುದು ಸರಿಯಲ್ಲವೇ? ಎರಡನೇದು ಇದರಲ್ಲಿ ಅಕೌಂಟ್ಸ್ ಆಫೀಸರುಗಳು ಎಂದು ಸೇರಿಸಿ ಇವರಿಗೆ ಹೆಚ್ಚಿನ ಕೆಲಸಗಳು ಎಂದರೆ ಸೋಷಿಯಲ್ ವೆಲ್‌ಫೇರ್ ಹಾಗೂ ಇನ್ನಿತರ ಕೆಲವು ಕೆಲಸಗಳನ್ನು ಕೊಟ್ಟಿರುವುದು ಸರಿಯಲ್ಲ. ಇದು ಹೇಗಿದೆ ಎಂದರೆ ಕೆಲಸದ ಜೊತೆಯಲ್ಲಿ ಇನ್ನಷ್ಟು ಹೆಚ್ಚು ಕೆಲಸವನ್ನು ಸೇರಿದಂತಾಗುತ್ತದೆ. ಇದರ ಸೈಕಲಾಜಿಕಲ್ ಎಫೆಕ್ಟ್ ಏನಾಗುತ್ತದೆ ಎಂದು ಯೋಚನೆ ಮಾಡಿದ್ದೀರಾ? ವೆಲ್‌ಫೇರ್ ಆಫೀಸರಿಗೆ ವಹಿಸಿರತಕ್ಕ ಇಂತಹ ಮಿಸಲೇನಿಯಸ್ ಕೆಲಸಗಳನ್ನು ತೆಗೆದು ಅವರು ಹೆಚ್ಚು ವೆಲ್‌ಫೇರ್ ಪ್ರಾಬ್ಲಂಸ್‌ನ್ನೆ ಇದರಲ್ಲಿ ನೋಡಿಕೊಳ್ಳುವ ಹಾಗೆ ಮಾಡಬೇಕು. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ್‌ರವರು ಹಿರಿಯ ಶಾಸಕರು ಹಾಗೂ ಹಿಂದೆ ರಾಜ್ಯದ ಉಪ ಮಂತ್ರಿಗಳಾಗಿದ್ದವರು. ಇವರು ಕೊಟ್ಟಿರುವ ಸಲಹೆಗಳು ಬಹಳ ಉಪಯುಕ್ತವಾದವು. ಇದನ್ನು ವಿಚಾರ ಮಾಡುತ್ತೇನೆ. ಇದಕ್ಕಾಗಿಯೇ ನಾನು ಇಲ್ಲಿ ಹೇಳುವುದು ಈಗ ಸರಕಾರದಲ್ಲಿ ಓಲ್ಡ್ ಏಜ್ ಪೆನ್‌ಷನ್ ಎಂದು ಕೊಡುತ್ತಿದ್ದಾರೆ. ಇದರಂತೆ ಬ್ಲೈಂಡ್‌ನೆಸ್ ಪೆನ್‌ಷನ್ ಎಂದು ಏಕೆ ಕೊಡ

ಬಾರದು ಎಂದು ವಿಚಾರ ಮಾಡುತ್ತಿದ್ದೇನೆ. ಕೆಲವು ಕಡೆ ಬಹಳ ಬಡವರಾಗಿರುವವರು ಕಣ್ಣಿಲ್ಲದೆ ಇರುವವರನ್ನು ನೋಡಿ ನನಗೆ ಬಹಳ ಅನುಕಂಪ ಉಂಟಾಗಿದೆ. ಇಂತಹ ಕಣ್ಣಿಲ್ಲದ ಕುರುಡು ಮಕ್ಕಳಿಗೆ ಏನಾದರೂ ಒಂದು ರೀತಿಯಾಗಿ ಬ್ಲೈಂಡ್‌ನೆಸ್ ಪೆನ್‌ಷನ್ ಏಕೆ ಕೊಡಬಾರದು ಎಂದು ಇದನ್ನೂ ಯೋಚನೆ ಮಾಡುತ್ತಿದ್ದೇನೆ.

ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ಕೆಲವು ಮಕ್ಕಳು, ಹೆಂಗಸರು, ಗಂಡಸರು, ಕುರುಡರು ನಮ್ಮ ಕಛೇರಿಗೆ ಬಂದು ವ್ಯಾಜ್ಯ ಮಾಡುವುದನ್ನು ನೋಡಿದರೆ, ನನ್ನ ಮನಸ್ಸಿನಲ್ಲಿ ಪರಿಣಾಮ ಉಂಟಾಗಿ ಅವರಿಗೆ ವಿಶೇಷವಾದ ರೀತಿಯಲ್ಲಿ ಅನುಕೂಲ ಏತಕ್ಕೆ ಮಾಡಬಾರದು ಎಂದು ಅನಿಸುವುದು. ಟೆಂಪರೆನ್ಸ್, ಲೆದರ್ ಬೋರ್ಡ್ ಮುಂತಾದವನ್ನು ಉಪ ಮಂತ್ರಿ ಅಥವಾ ರಾಜ್ಯ ಮಂತ್ರಿಗೆ ಅಟ್ಯಾಚ್ ಮಾಡಿ, ಉಳಿದಿದ್ದನ್ನು ಅಂದರೆ, ಹರಿಜನ ವೆಲ್‌ಫೇರ್ ಇಲಾಖೆಯನ್ನು ನಾವು ನೋಡಿಕೊಳ್ಳಬಹುದು.

ಶ್ರೀ ಜೆ. ಎಲ್. ಕಬಾಡಿ.—ಹೋಂ ಪೋರ್ಟ್‌ಫೋಲಿಯೋ ತಾವೇ ತೆಗೆದುಕೊಳ್ಳಿ.

ಶ್ರೀ ಎನ್ ರಾಚಯ್ಯ.—ನನ್ನಲ್ಲಿ ವಿಶ್ವಾಸವಿದ್ದರೆ, ಕೊಡುತ್ತಾರೆ ತಮ್ಮ ಸಲಹೆ ಎಲ್ಲವನ್ನೂ ಒಪ್ಪುತ್ತೇನೆ, ತಾವು ಹೇಳಿದ ಹಾಗೆ ಮಾಡೋಣ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ.—೧೦೦ ಕೋಟಿ ರೂಪಾಯಿಗಳನ್ನು ಬಡ್ಜೆಟ್ಟನಲ್ಲಿಟ್ಟು ನಾವು ಎಲ್ಲಾ ಮಾಡುತ್ತೇವೆಂದು ಹೇಳುತ್ತೀರಿ. ಅಷ್ಟು ಮೊಬಲಗಿನಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. Integrated economic development plans and programmes for scheduled caste and scheduled tribes ಗೋಸ್ಕರ ಪ್ರತಿ ಡಿಪಾರ್ಟ್‌ಮೆಂಟಿನಲ್ಲೂ ೧೮ ಪರ್ಸೆಂಟ್ ಮೀಸಲಾಗಿಟ್ಟಿದೆ. ೬೦ ಕೋಟಿ ರೂಪಾಯಿ ಬರುತ್ತದೆ. ೬೦ ಕೋಟಿ ರೂಪಾಯಿ ಬಡ್ಜೆಟ್ ಇದೆ. ಆ ರೀತಿ ಪ್ಲಾನ್ ಸ್ಕೀಂ ಮಾಡದೇ ಹೋದರೆ, ಈ ಮನೆಯಲ್ಲಿ ಕೊಟ್ಟ ಭರವಸೆಯನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಗಾಳಿ ಗೋಪುರವಾಗುತ್ತದೆ. ಇಂಡಸ್ಟ್ರಿ ವಿಷಯದಲ್ಲಿ ಏನೂ ಆಗಿಲ್ಲವೆಂದು ಹೇಳಬೇಕಾಗಿದೆ.

ಶ್ರೀ ಎನ್. ರಾಚಯ್ಯ.—ಪ್ರತಿಯೊಂದಕ್ಕೂ ಉತ್ತರ ಕೊಡಬೇಕಾದರೆ ಕೊನೇ ಪಕ್ಷ ೪–೫ ಘಂಟೆ ಬೇಕು. ಅಷ್ಟು ಸಮಸ್ಯೆಗಳು ಇವೆ. ನಾನು ಏನೇನು ಭರವಸೆ ಕೊಟ್ಟಿದ್ದೇನೆ, ಅವೆಲ್ಲವೂ ಆಗತಕ್ಕ ಕೆಲಸಗಳು. ಸರಕಾರದವರು ಡೆವಲಪ್‌ಮೆಂಟ್ ಕಾರ್ಪೊರೇಷನ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದನ್ನು ಕೇವಲ ಒಂದೆರಡು ತಿಂಗಳಲ್ಲೇ ಸಂಸ್ಥಾಪನೆ ಮಾಡುತ್ತಾರೆ. ಇನ್ನು ಲೆದರ್ ಬೋರ್ಡ್ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಮೂಲಕ ಆದರೆ, ಈ ಇಲಾಖೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಹರಿಜನರು ಸಿಗುತ್ತಾರೋ ಇಲ್ಲವೋ ಎನ್ನುವ ಪರಿಸ್ಥಿತಿ ಬರುತ್ತದೆ. ಆ ಮಟ್ಟದಲ್ಲಿ ನಿಮಗೆ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ವಿಚಾರದಲ್ಲಿ ಯಾವ ಅನುಮಾನವೂ ಇರಕೂಡದು. ಶ್ರೀ ಪ್ರಭಾಕರ್ ರವರು ಹೇಳಿದ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ,

ಶ್ರೀ ಜೆ. ಎಲ್. ಕಬಾಡಿ.—ರಿಮಾಂಡ್ ಹೋಂ, ಸರ್ಟಿಫೈಡ್ ಸ್ಕೂಲ್ಸ್ ವಗೈರೆ ನಿಮ್ಮ ಇಲಾಖೆ ನಡೆಸತಕ್ಕದ್ದು ಇದೆ. ಅವು ವ್ಯವಸ್ಥಿತವಾದ ರೀತಿಯಲ್ಲಿ ಇಲ್ಲ. ಅವನ್ನು ಓವರ್ ಹಾಲ್ ಮಾಡಬೇಕು. ಅದಕ್ಕಾಗಿ ಒಂದು ಕಮಿಟಿ ನೇಮಕ ಮಾಡಿದರೆ, ಈ ಡಿಪಾರ್ಟ್‌ಮೆಂಟನ್ನು ಚೆನ್ನಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ, ಈ ಬಗ್ಗೆ ಏನು ಮಾಡುತ್ತೀರಿ? ಇನ್ನೊಂದು, ಸ್ಥಳೀಯ ಸಂಸ್ಥೆಗಳಲ್ಲಿ ೧೮ ಪರ್ಸೆಂಟ್ ರಿಸರ್ವೇಷನ್ ಮಾಡುವ ಬಗ್ಗೆ ಆರ್ಡರ್ ಎಂದು ಆಗಿದೆ? ಅಲ್ಲಿ ಕಟ್ಟತಕ್ಕ ಪ್ಲಾಟ್ ಮತ್ತು ಅಂಗಡಿಗಳನ್ನು ಯಾವ ಹರಿಜನರಿಗೂ ಕೊಡದೆ, ಮುಂದುವರಿದ ಜನಾಂಗದವರಿಗೆ ಕೊಡುತ್ತಿದ್ದಾರೆ ಇದರಿಂದ ಹರಿಜನರಿಗೆ ಇಲ್ಲಿಯವರೆಗೂ ಅನ್ಯಾಯವಾಗುತ್ತಿದೆ. ಇದಕ್ಕೋಸ್ಕರ ೧೮ ಪರ್ಸೆಂಟ್ ರಿಜರ್ವೇಷನ್ ಇಡಬೇಕೆಂದ ಕಾಗದ ಬರೆದರೂ, ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ರಾಚಯ್ಯ.—ಪ್ರೊಬೇಷನ್ ಮತ್ತು ಆಫ್ಟರ್ ಕೇರ್ ಡಿಪಾರ್ಟ್‌ಮೆಂಟಿನಲ್ಲಿ ಏನು ಕೆಲಸ ಮಾಡುತ್ತಿದೆಯೋ ಅದು ಸಮರ್ಪಕವಾಗಿಲ್ಲ, ಹಣ ಹೆಚ್ಚಿಗೆ ವ್ಯಯವಾಗುತ್ತಿದೆ, ಅನೇಕ ಕಡೆಗಳಲ್ಲಿ ಹೆಣ್ಣು ಮಕ್ಕಳು ಮತ್ತು ಸಣ್ಣಮಕ್ಕಳುಗಳಿಗೆ ಅನುಕೂಲವಾಗುತ್ತಾ ಇಲ್ಲ. ಈ ಇಲಾಖೆಯನ್ನು ಸಂಪೂರ್ಣವಾಗಿ ಪುನರ್‌ವ್ಯವಸ್ಥೆ ಮಾಡಿ ಹೆಚ್ಚಿನ ರೀತಿಯಲ್ಲಿ ಇದಕ್ಕೆ ಜೀವಕಳೆಯನ್ನು ಕೊಡಬೇಕೆಂದು ನನ್ನ

(ಶ್ರೀ. ಎನ್. ರಾಚಯ್ಯ)

ಮನಸ್ಸಿಗೆ ಬಂದಿದೆ. ಇದು ಒಂದು ಇಲಾಖೆಯಲ್ಲಿ ಹರಿಜನರಾಗಲೀ ಗಿರಿಜನರಾಗಲೀ, ನೊಮಾಡಿಕ್ ಟ್ರೈಬ್ಸ್ ಆಗಲೀ ಶ್ರೀ ಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ, ಪ್ರತಿಯೊಂದು ಗುಂಪು, ಜನಾಂಗ ಏನು ಇದ್ದಾರೆ, ಅವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಯಾವ ರೀತಿ ಕೆಳಮಟ್ಟದಲ್ಲಿ ಇದ್ದಾರೆ ಎನ್ನುವ ಬಗ್ಗೆ ರೀಸರ್ಚ್ ಮಾಡಿಸಿ ಅಂಕಿ-ಅಂಶಗಳನ್ನು ತರಿಸಿಕೊಂಡು ಹರಿಜನರಿಗೆ ಸೌಲಭ್ಯ ಮಾಡುವ ಸಲುವಾಗಿ ಒಂದು ಸೂಕ್ತ ಸಲಹಾ ಸಮಿತಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ಥಳೀಯ ಸಂಸ್ಥೆಗಳ ಮತ್ತು ಗೌರ್ನಮೆಂಟ್ ಅಂಡರ್ ಟೇಕಿಂಗ್ಸ್ ಇವುಗಳ ವಿಚಾರದಲ್ಲಿ ಹೇಳುವುದಾದರೆ, ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೆಲವು ಕಡೆಗಳಲ್ಲಿ ಅನ್ಯಾಯ ಆಗಿರಬಹುದು. ಬೆಂಗಳೂರು ಮತ್ತು ಮೈಸೂರು ನಗರದಲ್ಲಿರುವ ಸ್ಥಳೀಯ ಸಂಸ್ಥೆಗಳಲ್ಲಿ ಸಾಮಾನ್ಯವಾಗಿ ಹರಿಜನರಿಗೆ ರಿಜರ್ವೇಶನ್ ಇಲ್ಲದೇ ಇದ್ದರೂ ಕೂಡ ನಮ್ಮ ಪ್ರಭಾವದಿಂದ ಸಿಕ್ಕಿದೆ. ೧೫ ಪರ್ಸೆಂಟ್ ಸಿಕ್ಕಿಲ್ಲದಿದ್ದರೆ, ಅಷ್ಟು ರಿಜರ್ವೇಶನ್ ಹರಿಜನರಿಗೆ ಮಾಡುವ ಹಾಗೆ ಅದಕ್ಕೂ ಆದೇಶ ಕಳುಹಿಸೋಣ. ಅಧಿಕಾರಿ ಸ್ಥಾನದಲ್ಲಿರುವವರು ಈ ಆದೇಶಕ್ಕೆ ಮಾನ್ಯತೆ ಕೊಡುತ್ತಾರೆ. ಇದರ ಬಗ್ಗೆ ಒತ್ತಾಯಪೂರ್ವಕವಾಗಿ ಕಾರ್ಯಕ್ರಮ ತೆಗೆದುಕೊಳ್ಳೋಣ. ಇನ್ನು ಷಾಪ್ಸ್ ಮತ್ತು ಸೈಟ್ಸ್ ಮತ್ತು ಮನೆಗಳ ವಿಚಾರದಲ್ಲಿ ಯಾವ ಯಾವ ಸೌಲಭ್ಯಗಳು ಬೇಕೋ ಈ ಎಲ್ಲ ವಿಚಾರದಲ್ಲೂ ಕನಿಷ್ಟಪಕ್ಷ ೨೦ ಭಾಗ ಹರಿಜನರಿಗೆ ಕಾಯ್ದಿಡತಕ್ಕ ವ್ಯವಸ್ಥೆ ಮಾಡುತ್ತೇನೆ. ಯೂನಿವರ್ಸಿಟಿಗಳಿಗೆ ನಾನೆ ಹೋಗಿ ಭೇಟಿ ಮಾಡಿ ಎಲ್ಲೆಲ್ಲಿ ಅನ್ಯಾಯವಾಗಿದೆ ಎಂಬುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ಮತ್ತು ಗೌರ್ನರ್ ಅವರ ಗಮನಕ್ಕೆ ತಂದು ಯಾರೇ ವೈಸ್ ಚಾನ್ಸಲರ್ ಆಗಿರಲಿ, ಯಾರೇ ರಿಜಿಸ್ಟ್ರಾರ್ ಆಗಿರಲಿ ಕಾನೂನಿನಂತೆ, ಸಂವಿಧಾನದಂತೆ ನಡೆಯದೇ ಇದ್ದ ಪಕ್ಷದಲ್ಲಿ, ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವ ಭರವಸೆ ಕೊಡುತ್ತೇನೆ. ಈ ವಿಚಾರದಲ್ಲಿ ನನಗೆ ಹೆಚ್ಚಿನ ಪರಿಶ್ರಮ ಇದೆ. ಸಲಹಾ ಸಮಿತಿ ಅಧ್ಯಕ್ಷನಾಗಿ ಈ ವಿಚಾರ ತಿಳಿದುಕೊಂಡು ಬಂದಿದ್ದೇನೆ. ಈ ವಿಚಾರದಲ್ಲಿ ಒತ್ತಾಯಪೂರ್ವಕವಾಗಿ ಸರಕಾರದ ಮುಂದೆ ಹರಿಜನರಿಗೆ ಆಗಿರುವ ಅನ್ಯಾಯವನ್ನು ಇಟ್ಟು ಅದನ್ನು ಸರಿಪಡಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ತಮಗೆ ಭರವಸೆ ಕೊಡುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸೆಂಟ್ರಲ್ ಕಾಲೇಜಿನಲ್ಲಿ ಐ.ಎ.ಎಸ್. ಟ್ರೈನಿಂಗ್ ೪ ದಿವಸ ಮಾಡಿ ನಂತರ ಕಿತ್ತು ಹಾಕಿದರು. ಐ.ಎ.ಎಸ್. ಟ್ರೈನಿಂಗ್‌ನಲ್ಲಿ ಆಸಕ್ತಿ ವಹಿಸಿ ಮತ್ತೆ ಅದಕ್ಕೆ ಇಲ್ಲೇ ಅವಕಾಶ ಮಾಡಿಕೊಡುತ್ತೀರಾ? ಮತ್ತು ಅಂಬೇಡ್ಕರ್‌ರವರ ಭಾವ ಚಿತ್ರವನ್ನು ಅನಾವರಣ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎನ್. ರಾಚಯ್ಯ.—ಅಂಬೇಡ್ಕರ್‌ರವರ ಭಾವ ಚಿತ್ರವನ್ನು, ಶಿಲಾ ಪ್ರತಿಮೆಯನ್ನು ಏರ್ಪಾಡು ಮಾಡಲು ನೀವೂ ನಾವೂ ಖಾಸಗಿಯವರಿಂದ ಹಣ ವಸೂಲು ಮಾಡಿ, ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡೋಣ. ಈ ಒಂದು ತಮ್ಮ ಸಲಹೆಯನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಮತ್ತು ಈ ವಿಚಾರದಲ್ಲಿ ಒತ್ತಾಯ ಮಾಡುತ್ತೇನೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ನೀವು ಇದರ ಬಗ್ಗೆ ನಿರ್ಣಯವನ್ನು ಕ್ಯಾಬಿನೆಟ್ ಮುಂದೆ ಇಟ್ಟು ಅದನ್ನು ಪಾಸ್ ಮಾಡಿಸಿ, ಈ ಮನೆಯಲ್ಲಿ ಇಡತಕ್ಕ ರೀತಿಯಲ್ಲಿ ಅವಕಾಶ ಮಾಡಿ ಕೊಡಬೇಕು.

ಶ್ರೀ ಎನ್. ರಾಚಯ್ಯ.—ಮುಖ್ಯ ಮಂತ್ರಿಗಳ ಮುಂದೆ ಇಟ್ಟರೆ, ಕ್ಯಾಬಿನೆಟ್ ಮುಂದೆ ಇಟ್ಟ ಹಾಗೆಯೇ. ಅವರಿಗೇ ಅಧಿಕಾರ ಇದೆ. ಅವರೇ ಮಾಡುತ್ತಾರೆ. ಇದು ಕ್ಯಾಬಿನೆಟ್‌ನಲ್ಲಿ ಹೋಗಬೇಕಾದ ವಿಷಯವಾಗಿದ್ದರೆ, ಅಲ್ಲೂ ಇಡುತ್ತೇನೆ ದಯವಿಟ್ಟು ಆಕ್ರೋಶ ಮಾಡಬೇಡಿ, ಶಾಂತ ರೀತಿಯಿಂದ ಮಾಡೋಣ. ಜಾಣತನದಿಂದ ಮಾಡಬೇಕೆ ಹೊರತು ವ್ಯಾಜ ಮಾಡುತ್ತಾ ಹೋಗುವುದು ಬೇಡ.

ಶ್ರೀ ಬಿ. ಎಲ್. ರಾಮಸ್ವಾಮಿ.—ಹರಿಜನ ಯುವತಿಯರನ್ನು ಸವರ್ಣೀಯರು ವಿವಾಹವಾದ ಸಂದರ್ಭದಲ್ಲಿ ಅವರಿಗೆ ನೌಕರಿ ಕೊಡುವುದಾಗಿ ಸರಕಾರದವರು ಹೇಳಿದ್ದು. ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ರಾಚಯ್ಯ.—ಅದನ್ನೂ ಪರಿಶೀಲನೆ ಮಾಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಉದ್ದೇಶ ಏನಿದೆ, ಅದನ್ನು ಸಾಧಿಸುವುದಕ್ಕಾಗಿಲ್ಲ. ಬಹಳ ಹಣ ಖರ್ಚಾಗಿದೆ. ಕಳೆದ ೨೦

ವರ್ಷಗಳಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ಕೊಟ್ಟಿದ್ದೇವೆ. The very object of the community development is to help the people to help themselves and to eradicate all social disabilities and to create an atmosphere where every rural people should fee that they are one, they are free citizens of India and they are free from all custom and regidities. ಆ ಒಂದು ರೀತಿಯಲ್ಲಿ ಗುರಿ ಸಾಧನೆ ಆಗಿಲ್ಲ. ಆ ಗುರಿ ಸಾಧನೆ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ. ಈ ಇಲಾಖೆಯಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಬಿಟ್ಟರೆ ಇನ್ನು ಎಲ್ಲಾ ಮಟ್ಟದಲ್ಲಿ ಕೂಡ ಡೆಪ್ಯುಟೇಷನ್ನಿನ ಮೇಲೆ ಇದ್ದಾರೆ. ಆದುದರಿಂದ ಎಲ್ಲಾ ಮಟ್ಟದಲ್ಲಿಯೂ ಇಲಾಖೆಯ ಸಿಬ್ಬಂದಿಯನ್ನು ಸರಿಪಡಿಸಿ, ಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲಿನ ರೀತಿ ಒಂದು ಹೈ ಪವರ್ಡ್ ಕನ್‌ಸಲ್ಟೇಟೀವ್ ಕಮಿಟಿ ಬೇರೆ ರಾಜ್ಯಗಳಲ್ಲಿ ಇರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಇದ್ದೇನೆ. ಅಪ್ಲೈಡ್ ನ್ಯೂಟ್ರಿಷನ್ ಕೋ ಆರ್ಡಿನೇಟರ್ ನೇಮಕ ಮಾಡಿದ್ದೇನೆ. ಆ ಹುದ್ದೆ ೨-೩ ವರ್ಷಗಳಿಂದ ಖಾಲಿ ಇತ್ತು. ಅದು ಯುನಿಸೇಫ್ ನೇಮಕ. ಬಡವರು, ಕಾರ್ಮಿಕರು ಮತ್ತು ಇತರ ವರ್ಗದವರಿಗೆ ಪೌಷ್ಟಿಕ ಆಹಾರ ಕೊಡುವ ವಿಷಯದಲ್ಲಿ ಕೆಲಸ ನಡೆಯುತ್ತಾ ಇರಲಿಲ್ಲ. ಆದಕ್ಕಾಗಿ ಕೋ ಆರ್ಡಿನೇಟರ್ ನೇಮಕ ಮಾಡಿ, ಅಪ್ಲೈಡ್ ನ್ಯೂಟ್ರಿಷನ್ ಪ್ರಾಜೆಕ್ಟ್‌ನ ಮೂಲಕ ಎಲ್ಲಾ ವರ್ಗದ ಮಕ್ಕಳಿಗೆ ಮತ್ತು ಹೆಣ್ಣು ಮಕ್ಕಳಿಗೆ ತಲುಪುವ ರೀತಿಯಲ್ಲಿ ಮಾಡಬೇಕೆಂದು ಸರಕಾರದವರು ಯೋಜನೆ ಇಟ್ಟುಕೊಂಡಿದ್ದಾರೆ.

12 noon

ಶ್ರೀ ಕೊಣಂದೂರು ಲಿಂಗಪ್ಪ.— ಕೇಂದ್ರದ ಇಂದಿರಾ ಗಾಂಧಿ ಸಂಪುಟದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಗೆ ಯಾವರೀತಿ ಪ್ರಾತಿನಿಧ್ಯ ಕೊಟ್ಟಿದ್ದಾರೆ ಎಂದು ಕೇಳಬೇಕು.

ಶ್ರೀ ಟಿ. ಪಿ. ಹೆಗರೆ.— ಕಾಲೇಜು ವಿದ್ಯಾರ್ಥಿಗಳ ಸ್ಕಾಲರ್‌ಷಿಪ್ ಮಹತ್ವದ ವಿಷಯ. ಮೆಡಿಕಲ್ ಸ್ಟೂಡೆಂಟ್‌ಗೆ ೧೨೫–೦೦ ರೂಪಾಯಿ ಕೊಡುತ್ತಾರೆ. ಇದರಲ್ಲಿ ತಾರತಮ್ಯ ಹೋಗಬೇಕು.

ಶ್ರೀ ಎನ್. ರಾಚಯ್ಯ.—ಶ್ರೀಮಾನ್ ತಿಮ್ಮಪ್ಪನವರು ಹೇಳಿದ ಹಾಗೆ ಶಿಕ್ಷಣ ಇಲಾಖೆಯಲ್ಲಿ ೮೦ಕೋಟಿ ಖರ್ಚು ಮಾಡುತ್ತಿದ್ದಾರೆ. ಕನಿಷ್ಠಪಕ್ಷ ೧೮ ಭಾಗದ ಹಣ ಸಣ್ಣಪುಟ್ಟ ಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡುತ್ತಿಲ್ಲ. ಈಗಾಗಲೆ ಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ಇಲಾಖೆಯಿಂದ ವರ್ಷಕ್ಕೆ ಸ್ಕಾಲರ್‌ಷಿಪ್‌ಗೆ ಆಗಲಿ, ಪುಸ್ತಕಕ್ಕೆ ಆಗಲಿ, ಸ್ಲೇಟಿಗೆ ಆಗಲಿ ಇನ್ನು ಯಾವುದೇ ಸೌಲಭ್ಯವನ್ನು ಒದಗಿಸತಕ್ಕಂಥಾದ್ದನ್ನು ನಾನು ಪ್ರಸ್ತಾಪ ಮಾಡಿ ಒಂದು ತೀರ್ಮಾನ ತೆಗೆದುಕೊಂಡು, ಮುಖ್ಯಮಂತ್ರಿಗಳನ್ನು ಒಪ್ಪಿಸಿ ಮಾಡತಕ್ಕ ಯೋಜನೆ ಇದೆ. ತಾವು ಏನು ಏನು ಸಲಹೆ ಕೊಟ್ಟಿದ್ದೀರಿ ಅವನ್ನು ನಾನು ತಲೆಯಲ್ಲಿ ತುಂಬಿಕೊಂಡಿದ್ದೇನೆ. ಎಲ್ಲವನ್ನೂ ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇನೆ, ಏನು ತಾರತಮ್ಯ ಇದ್ದರೂ ಎಲ್ಲಾ ಸರಿಪಡಿಸುತ್ತೇನೆ. ಇನ್ನು ಗ್ರಾಮ ಪಂಚಾಯಿತಿಗಳು ಭಾರತ ದೇಶದಲ್ಲಿ ಮೂಲಾಧಾರವಾದ ಸ್ತಂಭಗಳು, ಬಹು ಭಾಗದ ಶಾಸಕರು, ಇವುಗಳು ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಹೇಳುತ್ತಿದ್ದಾರೆ, ಅಂಕಿಅಂಶಗಳಿಂದ ಹಣ ಹೇಗೆ ದುರುಪಯೋಗವಾಗಿದೆ ಎಂಬುದನ್ನು ನಾನು ಹೇಳಬಲ್ಲೆ. ಅನೇಕ ಪಂಚಾಯಿತಿಗಳಲ್ಲಿ ಚೇರ್‌ಮನರುಗಳು, ಹಣ ಈ ರೀತಿ ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆ, ಬೆಂಗಳೂರು ೪೫, ಬಿಜಾಪುರ ೯ ಕೊಡಗು ೧೬, ಧಾರವಾಡ ೩೯, ರಾಯಚೂರು ೪೯, ನಾರ್ತ್ ಕೆನರಾ ೧೩, ಹಾಸನ ೪೮, ಚಿಕ್ಕಮಗಳೂರು ೨೦, ಕೋಲಾರ ೩೮, ಮಂಗಳೂರು ೪೬, ಶಿವಮೊಗ್ಗ ೬೦, ಬೆಳಗಾಂ ೧೩, ಇಷ್ಟು ಮಾತ್ರ ಬಂದಿವೆ, ೩೯೭ ಕೇಸುಗಳಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಹಣ ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕದ್ದು ೮,೯೦,೫೦೬–೮೫ ಪೈಸೆ, ಇದರಲ್ಲಿ ಹಣ ರೆಕವರಿ ಆಗಿರುವುದು ೧,೧೧,೯೩೯–೯೪ ಪೈಸೆ. ಈ ಪ್ರಸಂಗದಲ್ಲಿ ೨೭ ಜನ ಚೇರ್‌ಮನರು ಇನ್‌ವಾಲ್ವ್ ಆಗಿದ್ದಾರೆ. ಚೇರ್‌ಮನ್ ಮತ್ತು ಸೆಕ್ರೆಟರಿಯವರು ಸೇರಿ ೧೫೨ ಜನ ಇನ್‌ವಾಲ್ವ್ ಆಗಿದ್ದಾರೆ. ೨೦೦ ರೂಪಾಯಿಗಳ ಮೇಲ್ಪಟ್ಟು ಹಣ ದುರುಪಯೋಗವಾಗಿದ್ದರೂ ನಿಯಮಗಳ ಪ್ರಕಾರ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ತಿಳಿಸಬೇಕಾಗಿತ್ತು, ಯಾವುದೂ ತಿಳಿಸಿಲ್ಲ. ನಾನು ಬಂದಮೇಲೆ ಅಂಕಿಅಂಶ ತರಿಸಿ ತಮ್ಮ ಮುಂದೆ ಇಟ್ಟಿದ್ದೇನೆ. ಕೊಂಡಜ್ಜಿ ಬಸಪ್ಪನವರ ಸಮಿತಿ ವರದಿ ಇದೆ, ಅಲ್ಲಿ ವೀಕರ್ ಸೆಕ್ಷನ್‌ಗೆ ಇರ್ದಿಷ್ಟವಾಗಿ ಗ್ರಾಮಪಂಚಾಯಿತಿ, ತಾಲ್ಲೋಕು ಬೋರ್ಡ್‌ಗಳು ಇಯರ್ ಮಾರ್ಕ್ ಮಾಡಬೇಕು ಎಂದು ಹೇಳುತ್ತಾರೆ, ಪಂಚಾಯಿತಿಗಳನ್ನು ಇಟ್ಟುಕೊಳ್ಳುವ ಬದಲು ರದ್ದು ಮಾಡಬೇಕು ಎಂದು ವೀರಪ್ಪಗೌಡರು ಹೇಳಿದ್ದಾರೆ ಈ ಪಂಚಾಯಿತಿಗಳನ್ನು ಪುನರ್ ವ್ಯವಸ್ಥೆ ಮಾಡಬೇಕು. Rural administration at the village level must be re-

(ಶ್ರೀ ಎನ್. ರಾಚಯ್ಯ)

organized. ಅದನ್ನು ಮಾಡಬೇಕೆಂದು ಸಮಿತಿಯವರು ವರದಿ ಮಾಡಿದ್ದಾರೆ. ಒಂದು ಪಂಚಾಯಿತಿಗೆ ಕನಿಷ್ಟಪಕ್ಷ ೫ ಸಾವಿರವಾದರೂ ಪಾಪ್ಯುಲೇಶನ್ ಇರಬೇಕು. ಈಗ ಪಂಚಾಯಿತಿಯವರು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ನಮ್ಮ ಹಳ್ಳಿಗೆ ಬೇರೆ ಇರಬೇಕು ಎಂದು ಹೇಳುತ್ತಾರೆ, ೫೦೦ ಜನಸಂಖ್ಯೆ ಇದ್ದರೂ ಪಂಚಾಯಿತಿ ಮಾಡಿಬಿಡಿ ಎಂದು ಹೇಳುತ್ತಾರೆ. ಆದರೆ ೪ ಸಾವಿರ ೧೦ ಸಾವಿರ ಜನರಿಗೆ ಪಂಚಾಯಿತಿ ಮಾಡಿ ಅಲ್ಲಿ ನಾಮಿನೇಟೆಡ್ ಚೇರ್‌ಮನ್ ಮಾಡುವುದು ಒಳ್ಳೆಯದು ಎಲೆಕ್ಟೆಡ್ ಬಾಡಿ ಇರಲಿ.

ಶ್ರೀ ಕೋಣಂದೂರು ಲಿಂಗಪ್ಪ.— ನಾಮಿನೇಟೆಡ್ ಚೇರ್‌ಮನ್ ಮಾಡಿದರೆ ಇಂದಿರಾ ಗಾಂಧಿಯವರು ನಾಮಿನೇಟ್ ಮಾಡಿದ ಹಾಗಾಗುತ್ತದೆ.

ಶ್ರೀ ಎನ್. ರಾಚಯ್ಯ.— ಈಗಿನ ಪಂಚಾಯಿತಿ ತೆಗೆದುಕೊಂಡರೆ, ಹರಿಜನರಿಗೆ, ಮತ್ತು ಹಿಂದುಳಿದ ಜಾತಿಯವರಿಗೆ ಈಗ ಏನೂ ಮಾಡುವುದಕ್ಕಾಗುತ್ತಾ ಇಲ್ಲ ಈ ಸಲಹೆಯನ್ನು ನನ್ನ ಗಮನದಲ್ಲಿ ಇಟ್ಟುಕೊಂಡಿದ್ದೇನೆ. ತೀರ್ಮಾನ ತೆಗೆದುಕೊಂಡಿಲ್ಲ. ನಿಮ್ಮನ್ನು ಒಪ್ಪಿಸದೆ ಕಾನೂನು ಮಾಡುವುದಿಲ್ಲ, ನಾವು ಪ್ರಜಾ ಪ್ರಭುತ್ವದಲ್ಲಿದ್ದೇವೆ. ಡಿಕ್ಟೇಟರ್‌ಶಿಪ್ ಇಲ್ಲ. ನಮ್ಮ ಪಕ್ಷ ಇದೆ, ಕ್ಯಾಬಿನೆಟ್ ಇದೆ, ನನ್ನ ಚಿಂತನೆ ಏನು ಇದೆ ಅದನ್ನು ಅವರ ಮುಂದೆ ಇಡುತ್ತೇನೆ, ನಂತರ ಅದನ್ನು ತಮ್ಮ ಮುಂದೆ ಇಡುತ್ತೇನೆ. ಅದನ್ನು ತಿದ್ದುಪಡಿ ಮಾಡಿ ಬೇಡ ಎಂದು ಹೇಳಲಿಲ್ಲ. ಮಂತ್ರಿಯಾಗಿ ನಾನು ಯೋಚನೆ ಮಾಡುವುದು ಬೇಡ ಎಂದು ಹೇಳಿದರೆ ಏನು ಹೇಳುವುದು?

ಶ್ರೀ ಕೆ. ಹೆಚ್. ಹನುಮೇಗೌಡ.— ಅದಲು ಬದಲು ಸುಧಾರಣೆ ಆಗಿದೆ. ಇನ್ನು ಒಂದು ಸ್ಥಿರತೆ ಕೊಡುವುದಕ್ಕೆ ಆಗಿಲ್ಲ. ಒಂದು ಪಂಚಾಯಿತಿಗೆ ೩ ಸಾವಿರ, ೪ ಸಾವಿರ, ೫ ಸಾವಿರ ಪ್ರಜಾಸಂಖ್ಯೆ ಇರಬೇಕೆಂದು ಬದಲಾಯಿಸುತ್ತಾ ಹೋಗುತ್ತಿದ್ದೀರಿ.

ಶ್ರೀ ಎನ್. ರಾಚಯ್ಯ.— ನೀವು ನಾವು ಯೋಜನೆ ಮಾಡಿ ಖಾಯಂ ಸುಧಾರಣೆ ಮಾಡೋಣ. ನಂತರ ಕನಿಷ್ಟ ಪಕ್ಷ ೨೦ ೩೦ ವರ್ಷ ಅದಕ್ಕೆ ಕೈ ಹಾಕಬಾರದು ಈ ರೀತಿಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳ ಜೊತೆಗೆ ಮತ್ತು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಎಲ್ಲಾ ಕಡೆ ಪ್ರಸ್ತಾಪ ಮಾಡಿ, ಚರ್ಚೆ ಮಾಡಿ ಸಲಹೆ ತೆಗೆದುಕೊಂಡು ಸಮಗ್ರವಾದ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡರೆ ಮುಂದೆ ೨೦ ವರ್ಷಗಳಾದರೂ ಅದು ಮುಂದುವರಿಯಬೇಕು. ಗ್ರಾಮಾಂತರ ಮಟ್ಟದಲ್ಲಿ ಬಡವರಿಗೆ ಮಾನ ರಕ್ಷಣೆ, ಪ್ರಾಣ ರಕ್ಷಣೆ ಮತ್ತು ಆಸ್ತಿ ರಕ್ಷಣೆಯನ್ನು ಕೊಡಬೇಕೆಂದು ರಾಜ್ಯಾಂಗದಲ್ಲಿ ಹೇಳಿದೆ ಆ ರೀತಿ ಅವಕಾಶವನ್ನು ಒದಗಿಸಿಕೊಡಬೇಕು. ಗ್ರಾಮಾಂತರ ಪ್ರದೇಶ ಮಟ್ಟದಲ್ಲಿ ಚೇರ್‌ಮನ್ ಆದವರು ಹೋಲ್ ಟೈಂ ಆಫೀಸರ್ ಏಕಿರಬಾರದು ಎಂದು ಸರ್ಕಾರ ಯೋಚಿಸುತ್ತಾ ಇದೆ, ಸರ್ಕಾರದ ಯೋಜನೆಗಳು ಏನು ಇವೆ, ಆದೇಶಗಳು ಏನು ಇವೆ, ಅದರಲ್ಲಿ ನಂಬಿಕೆ ಇರುವವರನ್ನು, ೨೪ ಗಂಟೆ ಕೆಲಸ ಮಾಡಲು ಏಕೆ ಹಾಕಬಾರದು?

ಶ್ರೀ ಕೋಣಂದೂರು ಲಿಂಗಪ್ಪ.— ನಿಮ್ಮ ಪಕ್ಷದವರನ್ನೇ ಹಾಕಬೇಕು.

ಶ್ರೀ ಎನ್. ರಾಚಯ್ಯ.— ಪಂಚಾಯಿತಿ ಮಟ್ಟದಲ್ಲಿ ರಾಜಕೀಯ ಬೇಡ, ಪಕ್ಷ ಬೇಡ, ಸರ್ಕಾರದ ಆದೇಶಗಳನ್ನು, ಕಾರ್ಯಕ್ರಮಗಳನ್ನು, ಯೋಜನೆಗಳನ್ನು, ಜಾರಿಗೆ ಕೊಡಬೇಕು ಜನರು ಯಾವ ಪಕ್ಷಕ್ಕೆ ಓಟು ಕೊಡಲಿ. ಒಟ್ಟಿನಲ್ಲಿ ಜನತೆ ಕ್ಷೇಮಾಭ್ಯುದಯವಾಗಬೇಕು. ಪ್ರತಿಯೊಂದು ಪಂಚಾಯಿತಿಯಲ್ಲಿಯೂ ೧೫-೨೦ ಜನರನ್ನು ಒಳಗೊಂಡ ಎಲೆಕ್ಟೆಡ್ ಬಾಡಿ ಇರಲಿ ತಾವು ಎಲ್ಲಾ ಒಪ್ಪಿದರೆ ನಾಮಿನೇಟೆಡ್ ಚೇರ್‌ಮನ್ ಏತಕ್ಕೆ ಮಾಡಬಾರದು? ದೇಶದ ದೃಷ್ಟಿ ಇಟ್ಟುಕೊಳ್ಳಬೇಕೇ ಹೊರತು ನಮ್ಮ ಪಕ್ಷ, ನಿಮ್ಮ ಪಕ್ಷ ಎಂದು ದಯವಿಟ್ಟು ತಲೆಯಲ್ಲಿ ಇಟ್ಟುಕೊಳ್ಳಬೇಡಿ. ಈ ಒಂದು ದಿಸೆಯಲ್ಲಿ ಕೂಡ ಬಹಳ ತೀವ್ರವಾದಂಥ ರೀತಿಯಲ್ಲಿ ಪಂಚಾಯಿತಿ ರಚನೆ ಏತಕ್ಕೆ ಮಾಡಬಾರದು? ನಿಮ್ಮ ಸಲಹೆಗಳನ್ನು ತೆಗೆದುಕೊಂಡು ಗ್ರಾಮ ಪಂಚಾಯಿತಿಗಳ ವಿಚಾರದಲ್ಲಿ ಎಲ್ಲಾ ಮಟ್ಟದಲ್ಲೂ ಕೂಡ ಪುನರ್‌ವ್ಯವಸ್ಥೆ ಮಾಡುತ್ತೇನೆ, ಈ ಸಭೆಯಲ್ಲಿ ಆಶ್ವಾಸನೆ ಕೊಟ್ಟಿರುವ ರೀತಿಯಲ್ಲಿ, ತಾಲ್ಲೂಕು ಬೋರ್ಡ್ ಪಂಚಾಯಿತಿ, ಟೌನ್ ಪಂಚಾಯಿತಿ ಇವುಗಳಿಗೆಲ್ಲಾ ಒಂದು ಯೂನಿಫಾರಂ ಕೇಡರ್ ಮಾಡಬೇಕೆಂದು ಹೊರಟಿದ್ದೇವೆ. ಈಗ ಕೆಲವರನ್ನು ಪಂಚಾಯಿತಿಯವರು ಅಪಾಯಿಂಟ್ ಮಾಡುತ್ತಿದ್ದಾರೆ, ಇನ್ನು ಕೆಲವರನ್ನು ಬೋರ್ಡಿನವರು ಅಪಾಯಿಂಟ್ ಮಾಡುತ್ತಿದ್ದಾರೆ, ಇನ್ನು ಕೆಲವರನ್ನು, ಡೆಪ್ಯುಟಿ ಕಮೀಷನರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿಕೊಂಡು ಮೂರು ಜನ ಆಫೀಸರು ಸೇರಿಕೊಂಡು ಅವರಿಗೆ ಇಷ್ಟ ಬಂದವರನ್ನು ಅಪಾಯಿಂಟ್ ಮಾಡುತ್ತಿದ್ದಾರೆ. ಇದರಲ್ಲಿ ಹರಿಜನರಿಗೆ ಪಾಲು ಇಲ್ಲ. ಸಂಬಂಧಿಕರನ್ನು ಸಿಕ್ಕಾಪಟ್ಟೆ ಅಪಾಯಿಂಟ್

ಮಾಡುತ್ತಾ ಇದ್ದಾರೆ. ಕ್ವಾಲಿಫೈಡ್ ಕ್ಯಾಂಡಿಡೇಟ್ ನೇಮಕ ಮಾಡುತ್ತಾ ಇಲ್ಲ. ಆಸಕ್ತಿ ಇದ್ದ ಜನರನ್ನು ನೇಮಕ ಮಾಡುತ್ತಾ ಇಲ್ಲ. ಆಡಳಿತದಲ್ಲಿ ಅನೇಕ ಲೋಪದೋಷಗಳು ಇವೆ, ಇವುಗಳನ್ನು ಸರಿಪಡಿಸಬೇಕು, ಅದಕ್ಕಾಗಿ ಒಂದು ಯೂನಿಫಾರಂ ಕೇಡರ್ ಸರ್ವೀಸ್‌ನಲ್ಲಿ ಮಾಡಬೇಕು. ಯಾವುದೇ ಸಲಹೆಗಳನ್ನು ಮಾನ್ಯ ಸದಸ್ಯರು ಮಾಡಿದ್ದರೂ ಕೂಡ ಅವೆಲ್ಲವನ್ನೂ ಪರಿಶೀಲನೆ ಮಾಡುತ್ತೇನೆ. ಜನತೆಯ ದೃಷ್ಟಿಯಿಂದ ಅವರಿಗೆ ಒಳ್ಳೆಯದು ಆಗುವ ರೀತಿಯಲ್ಲಿ ರಾಜ್ಯಾಂಗದತ್ತವಾಗಿ ಹಕ್ಕುಬಾಧ್ಯತೆಗಳನ್ನು ಚಲಾಯಿಸುವ ದೃಷ್ಟಿಯಿಂದ ತಕ್ಕ ವ್ಯವಸ್ಥೆ ಮಾಡುತ್ತೇನೆ. ನಾನು ಇಷ್ಟೊಂದು ಹೇಳಿ ಮಾನ್ಯ ಸದಸ್ಯರು ನನ್ನ ಮೂರಂ ಬೇಡಿಕೆಗಳನ್ನು ಮಂಜೂರು ಮಾಡಬೇಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಭಾಷಣದಲ್ಲೇ ನಾವು ಸ್ವರ್ಗಕ್ಕೆ ಹೋದೆವು.

MADAM SPEAKER.— The question is:

"That a sum not exceeding Rs. 10,94,05,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 34 "Social Security and Welfare".

*The motion was adopted*

MADAM SPEAKER.— The question is:

"That a sum not exceeding Rs. 21,40,10,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 49 "Community Development".

*The motion was adopted*

MADAM SPEAKER.— The question is:

"That a sum not exceeding Rs. 6,77,50,000 inclusive of the sum granted 'on account be granted to the Government to defray the charges which will come in course of payment during the financial year ending 31st day of March 1975 in respect of Demand No. 60 "Compensation and Assignments to Local Bodies and Panchayati Raji Institutions".

*The motion was adopted and the demands granted*

MADAM SPEAKER.— The House will now adjourn and meet at 1 p.m.

*The House rose at Ten Minutes Past Twelve of the Clock and Reassembled Eleven Minutes Past One of the Clock.*

(Madam Speaker in the chair)